- Units will take JAC children to visit Libraries, Museums, prestigious institutions, central universities, art exhibitions, historical places, etc. at the local level.
- JAC children's meet with leaders.
- Units are advised to run JAC units in schools run by Tehreeki persons.

SIO shall equally focus on the expansion and consolidation of its activities to ensure that a large number of students and youth associate with the organisation, its influence expands, while its members cultivate organisational consciousness, adherence to discipline, and ideological harmony. Special attention shall be given to selected areas in this regard.

To spread the organisation's message among students and youth, expand its sphere of influence, and connect a large number of them with it, creativity, novelty, and excellence shall be infused into core activities and new avenues and initiatives will be explored to encourage participation. Areas where the organisation is relatively weak (state, district, city, or locality level) will be given particular attention.

It is also essential that organisational consciousness, adherence to discipline, and ideological harmony prevail among the members. Furthermore, members will be encouraged to remain consistently active in pursuing the organisation's aims and objectives and to exhibit unwavering love for the mission, mutual affection, compassion, sincerity, sacrifice, and determination. Efforts will be made to promote a healthy organisational culture characterized by obedience to leadership, respect for decisions, adherence to discipline, cooperation, team spirit, and generosity, etc., with a special focus on working in local areas.

Programs:

- Zone shall organise Leaders Meet.
- Zone shall appoint District Organisers in the selected district for expansion and consolidation.

- Zone shall organise Applicant Members' Camp.
- Zone shall organise a review meet of units every six months.
- Zone shall organise Mulaqat Series.
- Zone shall organise Selected Members Camp.
- Zone shall organise virtual meets with UPs and DPs.
- Zone shall organise State Level Members Meet.
- Zone shall focus on building leadership qualities among our cadres.
- District level Residential Summer Camp/Teens Camp shall be organised prior to Applicant Members' Camp.
- At unit level, review meet shall be organised every month.
- Units will encourage its cadre to be “Mursal of SIO” (Ambassador of SIO)
- Every member shall strive to make at least two new applicants’ members.

Guidelines:

- Units shall organise selected associates' training program.

Zonal Level Committees:

1. Academic Support Cell
2. Career Support Cell
3. JAC Committee
4. Dawah Committee
5. PR Team
6. Media Team
7. Audit Team

ರಾಜ್ಯಾಧ್ಯಕ್ಷರ ಸಂದೇಶ

ನನ್ನ ಆತ್ಮೀಯ ಸಹೋದರರೇ,

ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು

ಈ ಅವಧಿಯ ಅಂತ್ಯದ ವೇಳೆಗೆ, ಎಸ್.ಐ.ಓ ತನ್ನ 44 ವರ್ಷಗಳ ಪ್ರಯಾಣವನ್ನು ಪೂರ್ಣಗೊಳಿಸುತ್ತದೆ. ಎಸ್.ಐ.ಓ ತನ್ನ ಪ್ರಯಾಣದುದ್ದಕ್ಕೂ ವಿದ್ಯಾರ್ಥಿಗಳಲ್ಲಿ ಚಿಂತನೆಗಳನ್ನು ರೂಪಿಸುವ, ಬದಲಾವಣೆಗೆ ಪ್ರೇರೇಪಿಸುವ, ಅಲ್ಲಾಹನ ಮಾರ್ಗದಲ್ಲಿ ಸ್ಥಿರವಾಗಿರುವ ಒಂದು ವಿದ್ಯಾರ್ಥಿ ಸಮೂಹವನ್ನು ಸಿದ್ದಗೊಳಿಸುವ ಕೆಲಸವನ್ನು ಸದಾ ಮಾಡುತ್ತಾ ಬಂದಿದೆ.

ಸಂಘಟನೆಯು ಪರಿಸ್ಥಿತಿಗೆ ಅನುಗುಣವಾಗಿ ಎರಡು ವರ್ಷಗಳಿಗೊಮ್ಮೆ ತನ್ನ ಧೋರಣೆ ಮತ್ತು ಕಾರ್ಯಕ್ರಮವನ್ನು ರೂಪಿಸುತ್ತದೆ. ರಾಜ್ಯ ಸಲಹಾ ಸಮಿತಿಯ ಸದಸ್ಯರು ಮತ್ತು ವಿಶೇಷ ಆಹ್ವಾನಿತರು ಮೂರು ದಿನಗಳ ಕಾಲ ಸುದೀರ್ಘ ಚರ್ಚೆ ನಡೆಸಿ ಕರ್ನಾಟಕದ ಇಂದಿನ ಸ್ಥಿತಿಗತಿಯನ್ನು ಗಮನದಲ್ಲಿಟ್ಟುಕೊಂಡು ಹಲವಾರು ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಿದೆ. ತಯಾರುಗೊಳಿಸಿದ ಕಾರ್ಯ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಸಹೋದರರೇ, ಮೊದಲು ನಾವು ಅಲ್ಲಾನೊಂದಿಗಿನ ನಮ್ಮ ಸಂಬಂಧವನ್ನು ಬಲಪಡಿಸಬೇಕು ಹಾಗೂ ನಮ್ಮ ಎಲ್ಲಾ ಕೆಲಸಗಳು ಮತ್ತು ಕಾರ್ಯಗಳು ಆತನ ಆಜ್ಞೆ ಮತ್ತು ತೃಪ್ತಿಯನ್ನು ಅವಲಂಬಿಸಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನಾವು ಆಧ್ಯಾತ್ಮಿಕ ವಿದ್ಯಾರ್ಥಿ ಚಳುವಳಿಯಾಗಿರುವುದರಿಂದ ತಜ್ಕಿಯಾ ಮತ್ತು ತರ್ಬಿಯಾ ಯಾವಾಗಲೂ ನಮ್ಮ ಮುಖ್ಯ ಆದ್ಯತೆಗಳಾಗಿವೆ. ಈ ಸಂಘಟನೆಯ ಧ್ಯೇಯವು ಪ್ರವಾದಿ ಮುಹಮ್ಮದ್ (ಸ) ಅವರ ಧ್ಯೇಯದ ಮಾದರಿಯಾಗಿದೆ ಎಂದು ನಾವು ಪ್ರಾಯೋಗಿಕವಾಗಿ ಅರ್ಥಮಾಡಿಕೊಳ್ಳಬೇಕು. ನಮ್ಮ ಸಾಮೂಹಿಕ ಹೋರಾಟವು ಅಲ್ಲಾಹನ ಸೇವೆಗಾಗಿ ಎಂಬ ಇಸ್ಲಾಮಿನ ದೃಷ್ಟಿಕೋನ ನಮ್ಮಲ್ಲಿರಬೇಕು.

ಎರಡನೆಯದಾಗಿ, ಅಲ್ಲಾಹನ ಉದ್ದೇಶವನ್ನು ಪರಿಣಾಮಕಾರಿಯಾಗಿಸಲು ನಾವು ಸಾಧ್ಯವಾದಷ್ಟು ಜನರನ್ನು ಸಂಘಟನೆಯೊಳಗೆ ಕರೆತರುವುದು ಮುಖ್ಯವಾಗಿದೆ. ಮುಖ್ಯವಾಗಿ ನಾವು ನಮ್ಮ ಸುರಕ್ಷಿತ ವಲಯಗಳಿಂದ ಹೊರಬರಬೇಕು ಮತ್ತು ಜನಸಾಮಾನ್ಯರೊಂದಿಗೆ ತೊಡಗಿಸಿಕೊಳ್ಳಲು ನಾವು ಸಮಯವನ್ನು ನಿಶ್ಚಯಿಸಬೇಕು.

ಹಾಗೆಯೇ ನಮ್ಮ ಚಟುವಟಿಕೆಗಳು ಸೇವೆಯ ಸ್ವರೂಪದಲ್ಲಿರಬೇಕು ಮತ್ತು ಅದು ತಮ್ಮ ಮನೆಗಳಲ್ಲಿ, ಬೀದಿಗಳಲ್ಲಿ, ಪ್ರದೇಶಗಳಲ್ಲಿ ಕ್ಯಾಂಪಸ್‌ಗಳಲ್ಲಿ ಸಾಮಾಜಿಕ ಬದಲಾವಣೆಯ ವಾತಾವರಣವನ್ನು ಸೃಷ್ಟಿಸಿ ಪ್ರತಿಧ್ವನಿಸಬೇಕು ಎಂಬುದು ಗಮನಾರ್ಹ ಅಂಶವಾಗಿದೆ.

ಇಸ್ಲಾಮಿನ ಮೌಲ್ಯಗಳೊಂದಿಗೆ ಶಿಕ್ಷಣ ಮತ್ತು ಕ್ಯಾಂಪಸ್‌ಗಳನ್ನು ಪ್ರಬುದ್ಧಗೊಳಿಸುವುದು ನಮ್ಮ ಕನಸಾಗಿದೆ. ಅದು ನಮ್ಮ ಮುಂದಿರುವ ಸವಾಲುಗಳಾಗಿದೆ ಮತ್ತು ಅದುವೇ ನಮ್ಮ ಸ್ಫೂರ್ತಿ. ಶಿಕ್ಷಣ ಮತ್ತು ಕ್ಯಾಂಪಸ್‌ಗಳಲ್ಲಿನ ಅಸಮಾನತೆ ಹಾಗೂ ದ್ವೇಷವನ್ನು ನಿಭಾಯಿಸಲು ಚಳುವಳಿಗಳನ್ನು ನಿರ್ಮಿಸುವುದು ನಮ್ಮ ಆದ್ಯತೆ ಎಂಬುದು ಈ ಧೋರಣೆ ಮತ್ತು ಕಾರ್ಯಕ್ರಮದ ಒಳನೋಟವಾಗಿದೆ.

ನಮ್ಮ ಸಮಾಜದಲ್ಲಿ ದ್ವೇಷವು ಹೊಸ ರೂಢಿಯಾಗಿದೆ. ಅಂತಹ ಸಮಯದಲ್ಲಿ ನಾವು ನಮ್ಮೊಳಗೆ ದಾಯಿ ಗುಣಲಕ್ಷಣಗಳನ್ನು ಮೈಗೂಡಿಸಿಕೊಳ್ಳಬೇಕು ಮತ್ತು ಸಮಾಜದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ನಾವು ಸ್ವತಃ ಮಾರ್ಗದರ್ಶಕರಾಗಬೇಕು. ಮುಸ್ಲಿಮರು ಮತ್ತು ಇತರ ಅಲ್ಪಸಂಖ್ಯಾತರ ಮೇಲೆ ಕೋಮುವಾದದ ಘಟನೆಗಳು ಮತ್ತು ಸಂಘಟಿತ ದಾಳಿಗಳು ಅಪಪ್ರಚಾರಕ್ಕೆ ಸಾಕ್ಷಿಯಾಗಿದೆ, ಆದ್ದರಿಂದ ನಾವು ರಾಜ್ಯದಾದ್ಯಂತ ಸಾಮಾಜಿಕ ನ್ಯಾಯ ಚಳುವಳಿಗಳಲ್ಲಿ ಮುಂಚೂಣಿಯಲ್ಲಿರುವುದು ಅತ್ಯಗತ್ಯ.

ಬೌದ್ಧಿಕ ಬೆಳವಣಿಗೆಯನ್ನು ಬೆಳೆಸದೆ, ಇಸ್ಲಾಮಿನ ಚಿಂತನೆಯನ್ನು ಅಭಿವೃದ್ಧಿಪಡಿಸದೆ, ಕಾರ್ಯಕ್ರಮಗಳನ್ನು ರೂಪಿಸದೆ ಮತ್ತು ನಮ್ಮ ವ್ಯಾಪ್ತಿಯನ್ನು ವಿಸ್ತರಿಸದೆ ದೈವಿಕ ಮಾರ್ಗದರ್ಶನದ ಆಧಾರದ ಮೇಲೆ ಸಮಾಜವನ್ನು ಸಂಸ್ಥಾಪಿಸುವ ಉದ್ದೇಶವೂ ಈಡೇರುವುದಿಲ್ಲ ಸಂಘಟನೆಯ ವಿಸ್ತರಣೆಗೆ ಹೊಸ ಮಾರ್ಗಗಳನ್ನು ಅನ್ವೇಷಿಸುವ ಸಲುವಾಗಿ ಸಲಹಾ ಮಂಡಳಿಯು ಕೆಲವು ಕಾರ್ಯತಂತ್ರಗಳನ್ನು ಜಾರಿಗೆ ತಂದಿದೆ.

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಯುವಕರಲ್ಲಿ ಸಂಕೀರ್ಣತೆಗಳನ್ನು ಸೃಷ್ಟಿಸಿದೆ ಮತ್ತು ಮಾನಸಿಕ ಮತ್ತು ಅರ್ಥಹೀನತೆಗೆ ಕಾರಣವಾಗುತ್ತದೆ. ಲೈಂಗಿಕ ನೈತಿಕತೆಯ ಕ್ಷೀಣತೆ ಅತ್ಯಂತ ಕಾಳಜಿಯ ವಿಷಯವಾಗಿದೆ. ಇಂತಹ ದುರುದ್ದೇಶಪೂರಿತ ಸಿದ್ಧಾಂತಗಳಿಂದ ಯುವಕರನ್ನು ರಕ್ಷಿಸುವುದು ಎಸ್.ಐ.ಓ ವಿನ ಧ್ಯೇಯಗಳಲ್ಲಿ ಒಂದಾಗಿದೆ. ನಾವು ನೈತಿಕ ಸಂಸ್ಕೃತಿಯನ್ನು ಉತ್ತೇಜಿಸಬೇಕಾಗಿದೆ ಹಾಗೂ ಈ ಸಮಸ್ಯೆಗಳಿಗೆ ಸೈದ್ಧಾಂತಿಕವಾಗಿ ಮತ್ತು ಪ್ರಾಯೋಗಿಕವಾಗಿ ಪ್ರತಿಕ್ರಿಯಿಸಬೇಕಾಗಿದೆ.

ನನ್ನ ಪ್ರೀತಿಯ ಸಹೋದರರೇ, ಸಂದೇಶವಾಹಕರ ಕಾಲದಲ್ಲಿ ಇದ್ದಂತೆಯೇ ಹಲವಾರು ಸವಾಲುಗಳು ನಮ್ಮ ಮುಂದಿವೆ. ನಾವು ಪ್ರವಾದಿಗಳ

ಧ್ಯೇಯದಲ್ಲಿ ಕಾರ್ಯಾರಂಭಿಸುತ್ತಿರುವಾಗ, ಅಲ್ಲಾಹನು ನಮ್ಮ ಸಹಾಯಕ ಮತ್ತು ಮಾರ್ಗದರ್ಶಕನಾಗಿರಲಿ ಎಂಬ ಪ್ರಾರ್ಥನೆಯೊಂದಿಗೆ.

"ಹಗುರವಾದ ಸ್ಥಿತಿಯಲ್ಲಾಗಲಿ, ಭಾರವಾದ ಸ್ಥಿತಿಯಲ್ಲಾಗಲಿ ಹೊರಡಿರಿ. ನಿಮ್ಮ ಧನಗಳಿಂದಲೂ ಜೀವಗಳಿಂದಲೂ ಅಲ್ಲಾಹನ ಮಾರ್ಗದಲ್ಲಿ ಹೋರಾಟ ನಡೆಸಿರಿ. ನೀವು ಅರಿತಿದ್ದರೆ ಇದು ನಿಮಗೆ ಉತ್ತಮ." *(09.41)*

ಅದಿ ಅಲ್ ಹಸನ್

ರಾಜ್ಯಾಧ್ಯಕ್ಷರು, ಎಸ್.ಐ.ಓ ಕರ್ನಾಟಕ

ಶಾಬಾನ್ 1, 1446 । ಜನವರಿ 31, 2025

ದೃಷ್ಟಿಕೋನ

1) ಎಸ್.ಐ.ಓ ತನ್ನ ಸಂದೇಶವನ್ನು ಜನಸಾಮಾನ್ಯರಿಗೆ ತಲುಪುವಂತೆ ನೋಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಅದು ತನ್ನ ಕಾರ್ಯಕರ್ತರ ಬಲವನ್ನು ಹೆಚ್ಚಿಸುವ ಮತ್ತು ಹೊಸ ಕ್ಷೇತ್ರಗಳಲ್ಲಿ ತನ್ನ ಕೆಲಸವನ್ನು ವಿಸ್ತರಿಸುವತ್ತ ಗಮನಹರಿಸಬೇಕು.
2) ಎಸ್.ಐ.ಓ ತನ್ನ ಘಟಕಗಳಲ್ಲಿ ನಿಯಮಿತ ಕುರಾನ್ ಓದುವ ವಲಯವನ್ನು ಸ್ಥಾಪಿಸುವತ್ತ ಗಮನಹರಿಸಬೇಕು, ಇದರಿಂದಾಗಿ ಅದು ಅದರ ನಿಯಮಿತ ಕಾರ್ಯನಿರ್ವಹಣೆಯ ಆರೋಗ್ಯಕರ ಭಾಗವಾಗುತ್ತದೆ.
3) ಸಾಮಾಜಿಕ ತೊಡಗಿಸಿಕೊಳ್ಳುವಿಕೆ ಮತ್ತು ಬದಲಾವಣೆಯ ಸಾಧನಗಳಾಗುವ ಚಟುವಟಿಕೆಗಳನ್ನು ಆಯೋಜಿಸಲು ಎಸ್.ಐ.ಓ ವು ತನ್ನ ಆದ್ಯತೆಯನ್ನು ನೀಡುತ್ತದೆ.

ಧೋರಣೆಗಳು 2025–26

ಸಂಘಟನೆಯ ಕಾರ್ಯಕರ್ತರು ಆಧ್ಯಾತ್ಮಿಕ ಉನ್ನತಿ ಮತ್ತು ಸಮಗ್ರ ಆತ್ಮ ಸಂಸ್ಕರಣೆಗಾಗಿ (ತಜ್ಕಿಯಾ) ಶ್ರಮಿಸುವುದನ್ನು ಮುಂದುವರೆಸಬೇಕು. ಅಲ್ಲಾಹನೊಂದಿಗಿನ ಅವರ ಸಂಬಂಧವನ್ನು ಮೊದಲ ಮತ್ತು ಅಗ್ರಗಣ್ಯ ಅಗತ್ಯವೆಂದು ಪರಿಗಣಿಸಬೇಕು, ಈ ನಿಟ್ಟಿನಲ್ಲಿ, ಮೂಲಭೂತ ಆರಾಧನಾ ಕರ್ಮಗಳ ಅನುಸರಣೆ ಮತ್ತು ಕುರಾನ್‌ನೊಂದಿಗೆ ಆಳವಾದ ಸಂಪರ್ಕಕ್ಕೆ ವಿಶೇಷ ಗಮನವನ್ನು ನೀಡಬೇಕು, ಅದಕ್ಕಾಗಿ ಸಂಘಟನೆಯು ಮಾರ್ಗದರ್ಶನ ಮತ್ತು ಸಾಮೂಹಿಕ ವಾತಾವರಣವನ್ನು ಒದಗಿಸುವುದು.

ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮೇಲಿನ ಅಚಲವಾದ ಪ್ರೀತಿ ಮತ್ತು ಪರಲೋಕದ ಕಾಳಜಿ (ಫಿಕ್ರ್–ಎ–ಆಖಿರತ್) ವ್ಯಕ್ತಿಗಳ ಸ್ವಯಂ–ಶುದ್ಧೀಕರಣ (ತಜ್ಕಿಯಾ) ಮತ್ತು ಅಭಿವೃದ್ಧಿಯಲ್ಲಿ (ತರ್ಬಿಯಾ) ಮಹತ್ವದ ಪಾತ್ರವನ್ನು ಹೊಂದಿದೆ. ಆರಾಧನಾ ಕ್ರಿಯೆಗಳನ್ನು ವಿಧೇಯತೆ ಮತ್ತು ಶ್ರದ್ಧೆಯಿಂದ ಪ್ರಾರ್ಥನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು, ಬಾಧ್ಯತೆಗಳನ್ನು ಪರಿಪೂರ್ಣವಾಗಿ ಪೂರೈಸುವುದು ಮತ್ತು ಕುರಾನ್‌ನೊಂದಿಗೆ ಆಳವಾದ ಸಂಪರ್ಕವನ್ನು ಅಭಿವೃದ್ಧಿಪಡಿಸುವುದು ತಜ್ಕಿಯಾದ ಪ್ರಮುಖ ಅಂಶಗಳಾಗಿವೆ.

ತಜ್ಕಿಯಾದ ಪ್ರಭಾವವು ನಮ್ಮ ದೈಹಿಕ ಕ್ರಿಯೆಗಳು ಮತ್ತು ನಡವಳಿಕೆಗಳಲ್ಲಿ ಮಾತ್ರವಲ್ಲದೆ ಹೃದಯದ ಎಲ್ಲ ಬೌದ್ಧಿಕ ಮತ್ತು ಭಾವನಾತ್ಮಕ ಸ್ಥಿತಿಗಳಲ್ಲಿಯೂ ಸಹ ಸ್ಪಷ್ಟವಾಗಿರಬೇಕು. ನಂಬಿಕೆಯಲ್ಲಿ ದೃಢತೆ, ಹೃದಯದಲ್ಲಿ ಶುದ್ಧತೆ, ಕರ್ಮಗಳಲ್ಲಿ ಸ್ಥಿರತೆ, ಪರೋಪಕಾರ ವ್ಯಕ್ತಿತ್ವ, ಚಾರಿತ್ರ್ಯದಲ್ಲಿ ಶ್ರೇಷ್ಠತೆ ಮತ್ತು ಸಾಮರ್ಥ್ಯಗಳ ಬೆಳವಣಿಗೆಗೆ ಕಾರಣವಾಗುವ ರೀತಿಯಲ್ಲಿ ಅದು ಜೀವನದ ಪ್ರತಿಯೊಂದು ಅಂಶಗಳಲ್ಲಿ ಪ್ರಕಟವಾಗಬೇಕು.

ಅಲ್ಲಾಹನೊಂದಿಗೆ ನಿರಂತರ ಸಂಪರ್ಕಕ್ಕಾಗಿ, ನವಾಫಿಲ್, ದುವಾ, ಝಿಕ್ರ್, ಇಸ್ತಿಗ್ಫಾರ್ ನಲ್ಲಿ ಗಮನ ಹರಿಸುವುದು ಅತ್ಯಗತ್ಯ, ಪ್ರಪಂಚದ ನಶ್ವರತೆಯನ್ನು ಪ್ರತಿಬಿಂಬಿಸುವ ಜೊತೆಗೆ, ಅತಿಯಾದ ಸ್ಪರ್ಧೆ ಮತ್ತು ಕ್ಷುಲ್ಲಕತೆಗಳನ್ನು ತಪ್ಪಿಸುವುದು, ತೋರಿಕೆ ಮತ್ತು ಬೂಟಾಟಿಕೆಗಳಿಂದ ದೂರವಿರುವುದು ಇತ್ಯಾದಿಗಳತ್ತ ಗಮನ ಹರಿಸುವುದು ಪ್ರಮುಖವಾದುದು, ಅಲ್ಲಾಹನ ಮಾರ್ಗದಲ್ಲಿ ಹೋರಾಡುವುದು ಸಹ ತಜ್ಕಿಯಾದ ಒಂದು ಮಹತ್ವದ ಸಾಧನವಾಗಿದೆ.

ಆಧ್ಯಾತ್ಮಿಕ ಬೆಳವಣಿಗೆಯು ದೇಹ ಮತ್ತು ಆತ್ಮ ಎರಡರ ಬೇಡಿಕೆಗಳ ಸರಿಯಾದ ತಿಳುವಳಿಕೆಯನ್ನು ಒಳಗೊಂಡಿದೆ, ಅವುಗಳ ನಡುವೆ ಪರಿಪೂರ್ಣ ಸಮತೋಲನವನ್ನು ಕಾಯ್ದುಕೊಳ್ಳಬೇಕು ಹಾಗೂ ದೇವನು ಅವತೀರ್ಣಗೊಳಿಸಿದ ಮಾರ್ಗದರ್ಶನದಲ್ಲಿ ಅಲ್ಲಾನೊಂದಿಗೆ ಸಂಪರ್ಕ ಸಾಧಿಸುವ ಸಹಜ ಮಾನವ ಹಂಬಲವನ್ನು ಪೋಷಿಸುವುದು. ದೈಹಿಕ ಯೋಗಕ್ಷೇಮವು ಮುಖ್ಯವಾಗಿದ್ದರೂ, ಆತ್ಮದ ಅಗತ್ಯತೆಗಳಿಗೆ ಆದ್ಯತೆ ನೀಡಬೇಕು, ಇದಕ್ಕೆ ತವಕ್ಕುಲ್, ಸಬ್ರ್, ಶುಕ್ರ್ ಮತ್ತು ಇಹ್ಸಾನ್ ಮುಂತಾದ ಗುಣಗಳನ್ನು ಬೆಳೆಸುವ ಅಗತ್ಯವಿದೆ.

ತಜ್ಕಿಯಾಗೆ ಸಂಬಂಧಿಸಿದಂತೆ ಸಂಘಟನೆಯ ಮತ್ತು ಇಸ್ಲಾಮೀ ಆಂದೋಲನದ ಕಾರ್ಯಕರ್ತರೊಂದಿಗೆ ಪರಸ್ಪರ ಆರೋಗ್ಯಕರ ಸಂಬಂಧಗಳು ಹಾಗೂ ಸದ್ವರ್ತನೆಯ ಒಡನಾಟ ಮತ್ತು ಸ್ವಯಂ ಪಾರದರ್ಶಕತೆ ಅನಿವಾರ್ಯವಾಗಿದೆ. ಸಮಕಾಲೀನ ಯುಗವು ಯುವಕರಿಗೆ ವಿಭಿನ್ನ ಮಾನಸಿಕ ಮತ್ತು ನೈತಿಕ ಸವಾಲುಗಳನ್ನು ಒಡ್ಡಿದೆ. ಈ ನಿಟ್ಟಿನಲ್ಲಿ, ಬದುಕಿನ ವಾಸ್ತವಿಕತೆ, ವಿಚಾರ ಮತ್ತು ದೃಷ್ಟಿಕೋನದಲ್ಲಿ ಸ್ಥಿರತೆ ಹಾಗೂ ವಿವಿಧ ವ್ಯಸನಗಳನ್ನು ತೊಡೆದುಹಾಕಲು ಗಮನ ಕೊಡುವುದು ಮುಖ್ಯವಾಗಿದೆ. ತಜ್ಕಿಯಾಗೆ ಸಾಮೂಹಿಕ ವಾತಾವರಣ, ಪ್ರೇರೇಪಣೆ ಮತ್ತು ಮಾರ್ಗದರ್ಶನವನ್ನು ಒದಗಿಸುವುದು ಸಂಘಟನೆಯ ಜವಾಬ್ದಾರಿಯಾಗಿದೆ.

ಕಾರ್ಯಕ್ರಮಗಳು:

- ಎಲ್ಲಾ ಸದಸ್ಯರು ಕುರಾನ್ ಅನ್ನು ಸರಿಯಾದ ತಜ್ವೀದ್ ದೊಂದಿಗೆ ಓದುವುದು ಕಡ್ಡಾಯವಾಗಿದೆ. ಈ ನಿಟ್ಟಿನಲ್ಲಿ, ಕುರಾನ್ ಅನ್ನು ಅರ್ಥ, ವ್ಯಾಖ್ಯಾನಗಳ (ತಫ್ಸೀರ್) ಮೂಲಕ ಅರ್ಥಮಾಡಿಕೊಳ್ಳಲು ನಿರಂತರ ಪ್ರಯತ್ನಗಳನ್ನು ಮಾಡಬೇಕು ಹಾಗೂ ಅದರ ಬಗ್ಗೆ ಮತ್ತಷ್ಟು ಆಲೋಚಿಸುವುದು ಮತ್ತು ಕುರಾನ್‌ನ ಭಾಗಗಳನ್ನು ಕಂಠಪಾಠ ಮಾಡುವುದು ಖಿರಾನ್ ಅಧ್ಯಯನದ ಭಾಗವಾಗಿರಬೇಕು.
- ಎಲ್ಲಾ ಸದಸ್ಯರು ಪ್ರವಾದಿ ಮುಹಮ್ಮದ್ (ಸ.ಅ.ಸ) ರ ಹದೀಸ್ ಮತ್ತು ಜೀವನವನ್ನು ನಿರಂತರವಾಗಿ ಅಧ್ಯಯನ ಮಾಡಬೇಕು.
- ರಾಷ್ಟ್ರೀಯ ಮಟ್ಟದ ತಝ್ಕಿಯಾ ಅಭಿಯಾನವನ್ನು ಆಯೋಜಿಸಲಾಗುವುದು.
- ಇನ್ಫಾಕ್ (ದೇವ ಮಾರ್ಗದಲ್ಲಿ ವ್ಯಯಿಸುವ) ಮೌಲ್ಯಗಳನ್ನು ಉತ್ತೇಜಿಸಲು ರಾಷ್ಟ್ರೀಯ ಮಟ್ಟದಲ್ಲಿ ಇನ್ಫಾಕ್ ವಾರವನ್ನು ಆಚರಿಸಲಾಗುತ್ತದೆ.
- ತಜ್ಕಿಯಾ ಕಾರ್ಯಕ್ರಮವನ್ನು ಸ್ಥಾನೀಯ ಮಟ್ಟದಲ್ಲಿ ಆಯೋಜಿಸಬೇಕು. ರಾಜ್ಯವು ತಜ್ಕಿಯಾ ಬಗ್ಗೆ/ತಜ್ಕಿಯಾ ಕಾರ್ಯಕ್ರಮಕ್ಕಾಗಿ ವಿಷಯವಸ್ತು ಅನ್ನು ಸಿದ್ಧಪಡಿಸುತ್ತದೆ.
- ರಾಜ್ಯವು ಸೀರತ್ ಅಭಿಯಾನವನ್ನು ಆಯೋಜಿಸುತ್ತದೆ.

- ನಮ್ಮ ಸದಸ್ಯರ ಆಧ್ಯಾತ್ಮಿಕ ಮತ್ತು ವ್ಯಕ್ತಿತ್ವ ಬೆಳವಣಿಗೆಗಾಗಿ ರಾಜ್ಯವು ತರ್ಬಿಯಾ ಸಹಾಯಕ ಗುಂಪನ್ನು ರಚಿಸುತ್ತದೆ.
- ಫಜರ್ ಕ್ಲಬ್ ಅನ್ನು ಘಟಕ ಮಟ್ಟದಲ್ಲಿ ರಚಿಸಬೇಕು ಹಾಗೂ ದೈಹಿಕ, ಆಧ್ಯಾತ್ಮಿಕ ಮತ್ತು ಬೌದ್ಧಿಕ ಬೆಳವಣಿಗೆಗಾಗಿ ಅಸ್ತಿತ್ವದಲ್ಲಿರುವ ಕ್ಲಬ್‌ಗಳನ್ನು ಬಲಪಡಿಸಬೇಕು.
- ಜಿಲ್ಲೆಗಳು ಕ್ರೀಡಾಕೂಟವನ್ನು ಆಯೋಜಿಸಬೇಕು.
- ಪ್ರತಿಯೊಬ್ಬ ಸದಸ್ಯನು ತಜ್ಕಿಯಾ ಮಾರ್ಗದರ್ಶಿಯ ಬೆಳಕಿನಲ್ಲಿ ತನ್ನ ಸ್ವಯಂ–ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಬೇಕು ಹಾಗೂ ಅದನ್ನು ತನ್ನ ದೈನಂದಿನ ಜೀವನದಲ್ಲಿ ಅಳವಡಿಸಲು ಪ್ರೇರೇಪಿಸಲ್ಪಡುವಂತಿರಬೇಕು. ತಯಾರುಗೊಳಿಸಿದ ಯೋಜನೆಯ ಆಧಾರದ ಮೇಲೆ, ಸದಸ್ಯರು ತಮ್ಮ ಸ್ವಂತ ಪ್ರಗತಿಯನ್ನು ಪರಿಶೀಲಿಸಿಕೊಳ್ಳಬೇಕು.
- ಪ್ರತಿಯೊಂದು ಘಟಕವು ತನ್ನ ಕಾರ್ಯಕರ್ತನ ಶೈಕ್ಷಣಿಕ ಪ್ರಗತಿಯ ಮೇಲೆ ವಿಶೇಷ ಗಮನ ಹರಿಸಬೇಕು.

ಮಾರ್ಗಸೂಚಿಗಳು:

- ಕಾರ್ಯಕರ್ತರು ಪರಸ್ಪರ ಸೌಹಾರ್ದ ಮತ್ತು ಅನೌಪಚಾರಿಕ ಸಂಬಂಧವನ್ನು ರೂಪಿಸಬೇಕು ಹಾಗೂ ಘಟಕದಲ್ಲಿ ತಂಡದ ಆತ್ಮೀಯತೆಯನ್ನು ಅಭಿವೃದ್ಧಿಪಡಿಸಬೇಕು, ಇದಕ್ಕಾಗಿ, 'ಬಡ್ಡೀಸ್ ಕಾನ್ಸೆಪ್ಟ್' ಅನ್ನು ಪ್ರಚಾರಗೊಳಿಸಬೇಕು.
- ಪವಿತ್ರ ಕುರಾನ್‌ನ ವಿವಿಧ ವ್ಯಾಖ್ಯಾನಗಳನ್ನು ಓದುವುದು.
- 'ಎ ಡೇ ವಿತ್ ತೆಹ್ರೀಕಿ ಲೀಡರ್' ಅನ್ನು ಯೂನಿಟ್ ಮಟ್ಟದಲ್ಲಿ ಆಯೋಜಿಸಬಹುದು.
- ಕಾರ್ಯಕರ್ತರು ಮಸ್ನೂನ್ ಅಜ್ಕರ್ ಅನ್ನು ಪಠಿಸುವ ಅಭ್ಯಾಸವನ್ನು ಮಾಡಬೇಕು. ಈ ನಿಟ್ಟಿನಲ್ಲಿ, ಮಸೂರಾತ್ ಮತ್ತು ಹಿಸ್ನ್–ಉಲ್–ಮುಸ್ಲಿಮ್ ನಂತಹ ಪುಸ್ತಕಗಳನ್ನು ಬಳಸಿಕೊಳ್ಳಬಹುದು.
- ಕಾರ್ಯಕರ್ತರು ಪ್ರಜ್ಞಾಪೂರ್ವಕವಾಗಿ ಉತ್ತಮರ ಒಡನಾಟದಲ್ಲಿರಲು ಪ್ರಯತ್ನಿಸಬೇಕು ಅದಕ್ಕಾಗಿ ಆಧ್ಯಾತ್ಮಿಕ ನಾಯಕರು, ತೆಹ್ರೀಕ್–ಎ–ಇಸ್ಲಾಮಿ ಮತ್ತು ಎಸ್.ಐ.ಓ ನ ಹಿರಿಯ ಕಾರ್ಯಕರ್ತರು ಸೇರಿದಂತೆ ಜ್ಞಾನವುಳ್ಳ ವ್ಯಕ್ತಿಗಳೊಂದಿಗೆ ಮುರಬ್ಬಿಯಾನ ಸಂಬಂಧವನ್ನು ಹೊಂದಲು ಪ್ರಯತ್ನಿಸಬೇಕು. ಪ್ರತಿಯೊಬ್ಬ ಸದಸ್ಯರು ಮುರಬ್ಬಿ/ರಹಬರ್ ಅಥವಾ ಮಾರ್ಗದರ್ಶಿಯನ್ನು (JIH/SIO) ಅವರ ಸ್ವಂತ ಆಧ್ಯಾತ್ಮಿಕ ಅಭಿವೃದ್ಧಿಗಾಗಿ ಗುರುತಿಸಬೇಕು.
- ರಾಜ್ಯವು ಆಸಕ್ತ ಸದಸ್ಯರನ್ನು ವಿವಿಧ ವೇದಿಕೆಗಳ ಮೂಲಕ ಖುರಾನ್, ಅರೇಬಿಕ್ ಕಲಿಯಲು ನಿರ್ದೇಶಿಸಲಾಗುತ್ತದೆ.
- ತಜ್ಕಿಯಾ ಕಾರ್ಯಕ್ರಮದ ಪರಿಣಾಮಕಾರಿತ್ವವನ್ನು ಹೆಚ್ಚಿಸಲು ಘಟಕವು ಪ್ರಯತ್ನಿಸಬೇಕು.

- ಕಾರ್ಯಕರ್ತರು ತಮ್ಮ ಕುಟುಂಬ ಸದಸ್ಯರು ಮತ್ತು ಸಂಬಂಧಿಕರೊಂದಿಗೆ ಆಹ್ಲಾದಕರ ಸಂಬಂಧವನ್ನು ಹೆಚ್ಚಿಸಲು ಪ್ರಯತ್ನಿಸಬೇಕು.

ಎಸ್.ಐ.ಓ ವು ವಿದ್ಯಾರ್ಥಿಗಳು ಮತ್ತು ಯುವಕರಲ್ಲಿ ವಿನಮ್ರತೆ ಮತ್ತು ನೈತಿಕ ಸಂವೇದನೆಗಳನ್ನು ಪೋಷಿಸುತ್ತದೆ. ಇದು ಆಧುನಿಕ ವಿಶ್ವ ದೃಷ್ಟಿಕೋನ ಮತ್ತು ಜೀವನದ ಪರಿಕಲ್ಪನೆಯಿಂದ ಉದ್ಭವಿಸುವ ಲೈಂಗಿಕ ಅನೈತಿಕತೆ ಮತ್ತು ಮಾನಸಿಕ ಸಮಸ್ಯೆಗಳನ್ನು ಪರಿಹರಿಸಲು ಬೌದ್ಧಿಕ ಮತ್ತು ಪ್ರಾಯೋಗಿಕ ಪ್ರಯತ್ನಗಳನ್ನು ಕೈಗೊಳ್ಳುತ್ತದೆ.

ಹಯಾ (ವಿನಮ್ರತೆ) ಇಸ್ಲಾಮಿನ ಪ್ರಮುಖ ಮೌಲ್ಯವಾಗಿದೆ. ವಿನಮ್ರತೆ ಮತ್ತು ನೈತಿಕ ಸಂವೇದನೆಗಳು ವ್ಯಕ್ತಿಯ ವೈಯಕ್ತಿಕ ಮತ್ತು ಸಮಾಜವನ್ನು ರೂಪಿಸುವ ಅಗತ್ಯ ಸದ್ಗುಣಗಳಾಗಿವೆ. ಆದಾಗ್ಯೂ, ಆಧುನಿಕ ವಿಶ್ವ ದೃಷ್ಟಿಕೋನವು ವ್ಯಕ್ತಿ ಕೇಂದ್ರಿತ ಸ್ವಾತಂತ್ರ್ಯ ಮತ್ತು ಭೌತವಾದದ ಮೇಲೆ ಒತ್ತು ನೀಡುವುದರಿಂದ, ಇದು ಹಲವಾರು ಸವಾಲುಗಳನ್ನು ಹುಟ್ಟುಹಾಕಿದೆ, ವಿಶೇಷವಾಗಿ ಲೈಂಗಿಕ ಅನೈತಿಕತೆ ಮತ್ತು ಮಾನಸಿಕ ಸಮಸ್ಯೆಗಳಿಗೆ ಕಾರಣವಾಗಿದೆ.

ಮಾಧ್ಯಮಗಳ ವ್ಯಾಪಕ ಪ್ರಭಾವ, ಬದಲಾಗುತ್ತಿರುವ ಸಾಂಸ್ಕೃತಿಕ ರೂಢಿಗಳು ಮತ್ತು ನೈತಿಕ ಮೌಲ್ಯಗಳ ಕುಸಿತದಿಂದ ಈ ಸವಾಲುಗಳು ಹೆಚ್ಚಾಗುತ್ತಿವೆ. ಯುವಜನರು ನಿರ್ದಿಷ್ಟವಾಗಿ ಹೇಳುವುದಾದರೆ, ಈ ಒತ್ತಡಗಳನ್ನು ನಿಭಾಯಿಸುವಾಗ ಗೊಂದಲ ಮತ್ತು ನೈತಿಕ ದಿಗ್ಭ್ರಮೆಯನ್ನು ಎದುರಿಸುತ್ತಾರೆ, ಇದು ಅನೈತಿಕ ನಡವಳಿಕೆಗಳು ಮತ್ತು ಮಾನಸಿಕ ಆರೋಗ್ಯದ ಹೆಣಗಾಟಕ್ಕೆ ಕಾರಣವಾಗುತ್ತದೆ.

ಇಸ್ಲಾಮಿಕ್ ಸಂಘಟನೆಯಾಗಿ, ಎಸ್.ಐ.ಓ ವು ವಿದ್ಯಾರ್ಥಿಗಳು ಮತ್ತು ಯುವಜನರನ್ನು ಇಸ್ಲಾಮೀನ ನೈತಿಕತೆಯ ಆಧಾರದ ಮೇಲೆ ಜೀವನದ ಕಡೆಗೆ ಮಾರ್ಗದರ್ಶನ ಮಾಡುವ ಜವಾಬ್ದಾರಿಯನ್ನು ನಿರ್ವಹಿಸುತ್ತದೆ. ಇದು ಆಧುನಿಕ ವಿಶ್ವ ದೃಷ್ಟಿಕೋನದ ತಾತ್ವಿಕ ತಳಹದಿಯೊಂದಿಗೆ ಬೌದ್ಧಿಕವಾಗಿ ತೊಡಗಿಸಿಕೊಳ್ಳುತ್ತದೆ, ವೈಯಕ್ತಿಕ ಮತ್ತು ಸಾಮೂಹಿಕ ನಡವಳಿಕೆ ಹಾಗೂ ನೈತಿಕತೆಯ ಮೇಲೆ ಅದರ ಪ್ರಭಾವವನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುತ್ತದೆ.

ಹೆಚ್ಚುವರಿಯಾಗಿ, ಸೈಬರ್‌ಸ್ಪೇಸ್, ಪರಸ್ಪರ ಸಂಬಂಧಗಳು ಮತ್ತು ನೈತಿಕ ಇಕ್ಕಟ್ಟುಗಳ ಸಂಕೀರ್ಣತೆಗಳನ್ನು ನಿಭಾಯಿಸಲು ವಿದ್ಯಾರ್ಥಿಗಳು ಮತ್ತು ಯುವಜನರಿಗೆ ಪೋಷಣೆ ಮತ್ತು ಬೆಂಬಲವನ್ನು ಒದಗಿಸಲು ಎಸ್.ಐ.ಓ ವು ಪ್ರಾಯೋಗಿಕ ಉಪಕ್ರಮಗಳನ್ನು ಕೈಗೊಳ್ಳುತ್ತದೆ ಹಾಗೂ ನೈತಿಕ ನಡವಳಿಕೆಯನ್ನು ಉತ್ತೇಜಿಸುತ್ತದೆ ಮತ್ತು ಉನ್ನತೀಕರಿಸುತ್ತದೆ. ಇದನ್ನು ಸಾಧಿಸಲು, ಎಸ್.ಐ.ಓ ವು

ಸಂಪನ್ಮೂಲಗಳ ಅಭಿವೃದ್ಧಿ ಮತ್ತು ಸಂಭಾಷಣೆ ಹಾಗೂ ಬೆಂಬಲ ವ್ಯವಸ್ಥೆಗಳಿಗೆ ವೇದಿಕೆಗಳನ್ನು ತೊಡಗಿಸಿಕೊಳ್ಳುವುದರ ಮೇಲೆ ಗಮನ ಹರಿಸುತ್ತದೆ.

ಕಾರ್ಯಕ್ರಮಗಳು:

- ರಾಷ್ಟ್ರೀಯ ಮಟ್ಟದಲ್ಲಿ ಯುವಜನರ ಸಮಸ್ಯೆಗಳ ಕುರಿತು ಅಭಿಯಾನವನ್ನು ಆಯೋಜಿಸಲಾಗುವುದು.
- ನಮ್ಮ ಕಾರ್ಯಕರ್ತರ ನೈತಿಕ ಸಮಸ್ಯೆಗಳನ್ನು ನಿಭಾಯಿಸಲು ರಾಜ್ಯವು ತಜ್ಕಿಯಾ ಸಹಾಯಕ ಗುಂಪನ್ನು ರಚಿಸುತ್ತದೆ.
- ರಾಜ್ಯವು ಇಸ್ಲಾಮಿನ ತತ್ವಗಳಿಗೆ ಅನುಸಾರವಾಗಿ ಮದುವೆ, ಲಿಂಗ ಮತ್ತು ಲೈಂಗಿಕ ಅವನತಿ ವಿಷಯಗಳ ಕುರಿತು ವಿದ್ಯಾರ್ಥಿಗಳು ಮತ್ತು ಯುವಕರನ್ನು ಸಂವೇದನಾಶೀಲಗೊಳಿಸುವುದು.
- ರಾಜ್ಯವು ವೀಡಿಯೊ ಉಪನ್ಯಾಸ ಸರಣಿಯ ರೂಪದಲ್ಲಿ ವಿಷಯ ರಚನೆಯ ಮೇಲೆ ಗಮನ ಹರಿಸುತ್ತದೆ ಮತ್ತು ಅದನ್ನು ಪ್ರಸಾರ ಮಾಡುತ್ತದೆ.

ಮಾರ್ಗಸೂಚಿಗಳು:

- ಪ್ರೌಢಶಾಲೆ, ಕಾಲೇಜು ವಿದ್ಯಾರ್ಥಿಗಳು ಮತ್ತು ನಮ್ಮ ಕಾರ್ಯಕರ್ತರಿಗಾಗಿ "ಕಡಿಮೆ ಚರ್ಚಿತ ವಿಷಯಗಳ" ಕುರಿತು ಚರ್ಚಿಸಲು ಕಾರ್ಯಕ್ರಮ/ಉಪನ್ಯಾಸವನ್ನು ಆಯೋಜಿಸಲು ಘಟಕಗಳನ್ನು ಪ್ರೋತ್ಸಾಹಿಸಲಾಗುವುದು.
- ಯುವಜನರ ಈ ಬಗೆಯ ಸಮಸ್ಯೆಗಳನ್ನು ಚರ್ಚೆ/ಪರಿಹರಿಸಲು ಘಟಕಗಳು ಮಸೀದಿಯನ್ನು ಕೇಂದ್ರವನ್ನಾಗಿ ಮಾಡಬೇಕು.

ಕಾರ್ಯಕರ್ತರು ನಿರಂತರವಾಗಿ ಬೌದ್ಧಿಕ ಮತ್ತು ಸೈದ್ಧಾಂತಿಕ ಬೆಳವಣಿಗೆಗೆ ಶ್ರಮಿಸಬೇಕು, ಜೊತೆಗೆ ವೈಯಕ್ತಿಕ ಅಧ್ಯಯನ ಮತ್ತು ಚಿಂತನೆಯ ಮೂಲಕ ಸ್ವಯಂ ಶುದ್ಧೀಕರಣ (ತಜ್ಕಿಯಾ) ಮಾಡಿಕೊಳ್ಳಬೇಕು, ಈ ನಿಟ್ಟಿನಲ್ಲಿ, ಸಂಘಟನೆಯೂ ಸಾಮೂಹಿಕ ವಾತಾವರಣವನ್ನು ಒದಗಿಸುವುದು.

ವ್ಯಕ್ತಿಗಳಲ್ಲಿ ಬೌದ್ಧಿಕ ಮತ್ತು ಸೈದ್ಧಾಂತಿಕ ಬೆಳವಣಿಗೆಗೆ ಹಾಗೂ ಸ್ವಯಂ ಶುದ್ಧೀಕರಣಕ್ಕೆ ಅಧ್ಯಯನ ಮತ್ತು ಚಿಂತನೆ ಅತ್ಯಗತ್ಯ. ಜಗತ್ತಿಗೆ ಮಾರ್ಗದರ್ಶನ ನೀಡಲು, ಮೇಲ್ನೋಟದ ತಿಳುವಳಿಕೆಗೆ ಹೋಲಿಸಿದರೆ ಆಳವಾದ ಅಧ್ಯಯನ ಮತ್ತು ವ್ಯವಸ್ಥಿತ ಚಿಂತನೆಯು ಅನಿವಾರ್ಯವಾಗಿದೆ. ಎಸ್.ಐ.ಓ ವು ವಿದ್ಯಾರ್ಥಿಗಳಲ್ಲಿ, ವಿಶೇಷವಾಗಿ ಅದರ ಕಾರ್ಯಕರ್ತರಲ್ಲಿ ಅಧ್ಯಯನ ಮತ್ತು ಚಿಂತನೆಯ ಸಂಸ್ಕೃತಿಯನ್ನು ಬೆಳೆಸಲು ಶ್ರಮಿಸುತ್ತದೆ, ಅವರ ಜ್ಞಾನದ ಆಳ, ಅವರ ಸಿದ್ಧಾಂತದಲ್ಲಿ ದೃಢತೆಯನ್ನು ಉತ್ತೇಜಿಸುತ್ತದೆ.

ಪುಸ್ತಕಗಳಾಗಲಿ ಅಥವಾ ಪ್ರಪಂಚದಾಗಲಿ, ಚಿಂತನೆ, ವಿವೇಚನೆ ಮತ್ತು ವಿಮರ್ಶಾತ್ಮಕ ವಿಶ್ಲೇಷಣೆಯು ಅಧ್ಯಯನದ ಮೂಲಾಧಾರವಾಗಿದೆ. ಈ ನಿಟ್ಟಿನಲ್ಲಿ ಖುರಾನ್, ಹದೀಸ್ ಮತ್ತು ಸೀರತ್ ಗಳ ಅಧ್ಯಯನವು ಅತ್ಯಂತ ಮಹತ್ವದ್ದಾಗಿದೆ. ಕುರಾನ್‌ನೊಂದಿಗಿನ ಸತ್ಯವಿಶ್ವಾಸಿಯ ಸಂಬಂಧವು ಪಠಣದಿಂದ ಪ್ರಾರಂಭವಾಗುತ್ತದೆ ಮತ್ತು ಕಂಠಪಾಠ, ಚಿಂತನೆ, ಅನುಷ್ಠಾನ ಹಾಗೂ ಅದರ ಬೋಧನೆಗಳ ಕಡೆಗೆ ಆಹ್ವಾನದ ಮೂಲಕ ಮುಂದುವರಿಯುತ್ತದೆ. ಅದೇ ರೀತಿ, ಸೀರತ್ ನ ನಿರಂತರ ಅಧ್ಯಯನದ ಮೂಲಕ ಸತ್ಯ ವಿಶ್ವಾಸಿಯು ಬೌದ್ಧಿಕ ಮತ್ತು ಪ್ರಾಯೋಗಿಕ ಹೋರಾಟಕ್ಕೆ ಚೈತನ್ಯ ಮತ್ತು ಸ್ಫೂರ್ತಿಯನ್ನು ಪಡೆಯುತ್ತಾನೆ. ಇದಲ್ಲದೆ, ತೆಹ್ರೀಕ್–ಎ–ಇಸ್ಲಾಮಿಯ ಮೂಲಭೂತ ಸಿದ್ಧಾಂತವನ್ನು ಆಳವಾಗಿ ಅರ್ಥಮಾಡಿಕೊಳ್ಳುವತ್ತ ಗಮನವನ್ನು ಹರಿಸಬೇಕು.

ಭಾಷೆ ಮತ್ತು ಸಾಹಿತ್ಯದ ಉತ್ತಮ ತಿಳುವಳಿಕೆಯು ಓದುವ ಉತ್ಸಾಹ, ಬೌದ್ಧಿಕ ಪ್ರಜ್ಞೆ, ಬುದ್ಧಿವಂತಿಕೆ ಮತ್ತು ತನ್ನನ್ನು ತಾನು ವ್ಯಕ್ತಪಡಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುತ್ತದೆ. ಆತ್ಮಾವಲೋಕನ ಮತ್ತು ಪ್ರಪಂಚದ ಪ್ರತಿಬಿಂಬವು ಆಳವಾದ ಒಳನೋಟ ಮತ್ತು ಹೃದಯದ ತೃಪ್ತಿಯ ಅರಿವಿನತ್ತ ಮಾರ್ಗದರ್ಶನ ನೀಡುತ್ತದೆ.

ಕಾರ್ಯಕ್ರಮಗಳು:

- ರಾಜ್ಯ ಮಟ್ಟದಲ್ಲಿ ನಿಯಮಿತ ಪುಸ್ತಕ ಮಾತುಕತೆ/ಚರ್ಚೆಗಳನ್ನು ಆಯೋಜಿಸಲಾಗುವುದು.
- ಜಿಲ್ಲಾ ಮಟ್ಟದ ಓದುಗರ ಕಾರ್ಯಾಗಾರವನ್ನು ಆಯೋಜಿಸಲಾಗುವುದು.
- ಸದಸ್ಯತ್ವ ನಂತರದ ಅಧ್ಯಯನ ಕೋರ್ಸ್ ಅನ್ನು ರಾಜ್ಯವು ವಿನ್ಯಾಸಗೊಳಿಸಲಾಗುವುದು ಮತ್ತು ಸದಸ್ಯರು ಅದನ್ನು ಅನುಸರಿಸಬೇಕು.
- ಸ್ಥಾನೀಯ ಮಟ್ಟದಲ್ಲಿ ಸ್ಥಿರವಾಗಿ "ಕುರಾನ್ ಸ್ಟಡಿ ಸರ್ಕಲ್" ಗಳನ್ನು ನಿಯಮಿತವಾಗಿ ಆಯೋಜಿಸಬೇಕು.
- ರಾಜ್ಯವು ಕುರಾನ್ ಸ್ಟಡಿ ಸರ್ಕಲ್ ನ ಸಂಘಟಕರಿಗೆ ಕಾರ್ಯಕ್ರಮವನ್ನು ಆಯೋಜಿಸುತ್ತದೆ.
- ಜಿಲ್ಲಾ ಮಟ್ಟದಲ್ಲಿ ಅಧ್ಯಯನ ಗುಂಪನ್ನು ರಚಿಸಲು ಜಿಲ್ಲೆಗಳಿಗೆ ಸೂಚಿಸಲಾಗಿದೆ.
- ಘಟಕಗಳು ಅಧ್ಯಯನ ಪ್ರವಾಸಗಳು/ವಿಹಾರ ಸಂಚಾರವನ್ನು ಆಯೋಜಿಸಬೇಕು.
- ಘಟಕಗಳು ಅಸ್ತಿತ್ವದಲ್ಲಿರುವ ಲೈಬ್ರರಿಗಳನ್ನು ಬಲಪಡಿಸಬೇಕು ಮತ್ತು ಲೈಬ್ರರಿಗಳಿಲ್ಲದ ಘಟಕಗಳು ಹೊಸದಾಗಿ ವ್ಯವಸ್ಥೆ ಮಾಡಬೇಕು.
- ಓದುಗರ ವೇದಿಕೆಯನ್ನು ಬಲಪಡಿಸಲಾಗುವುದು.

- ಘಟಕಗಳು ಕಾರ್ಯಕರ್ತರಿಗೆ ತಮ್ಮ ಆಸಕ್ತಿಯ ಪುಸ್ತಕಗಳನ್ನು ಓದಲು ಆರೋಗ್ಯಕರ ವಾತಾವರಣವನ್ನು ಒದಗಿಸಲು ರೀಡ್–ಅಥಾನ್ (Read–athon)ಅನ್ನು ಆಯೋಜಿಸಬೇಕು, ಇದು ಸಾಪ್ತಾಹಿಕ ಕಾರ್ಯಕ್ರಮಗಳ ಭಾಗವೂ ಆಗಿರಬಹುದು.
- ಘಟಕಗಳು "ಮಾನವ ಗ್ರಂಥಾಲಯದ" ಕಾರ್ಯಕ್ರಮವನ್ನು ಆಯೋಜಿಸಬೇಕು.

ಮಾರ್ಗಸೂಚಿಗಳು:

- ಜಿಲ್ಲೆಗಳು/ಘಟಕಗಳು ಐತಿಹಾಸಿಕ ಸ್ಥಳಗಳಿಗೆ ಪಾರಂಪರಿಕ ನಡಿಗೆಯನ್ನು ಆಯೋಜಿಸಲು ಸೂಚಿಸಲಾಗಿದೆ.
- ಘಟಕಗಳು ಕಾರ್ಯಕರ್ತರ ನಡುವೆ ಪುಸ್ತಕಗಳ ಉಡುಗೊರೆಯಾಗಿ ನೀಡಲು ಮತ್ತು ವಿನಿಮಯ ಮಾಡಿಕೊಳ್ಳಲು ಒಂದು ದಿನವನ್ನು ಆಚರಿಸಬೇಕು.
- ಸ್ಥಳೀಯ ಗ್ರಂಥಾಲಯಗಳು ಮತ್ತು ಪುಸ್ತಕದಂಗಡಿಗಳಿಗೆ ಸಾಮೂಹಿಕವಾಗಿ ಭೇಟಿ ನೀಡಲು ಘಟಕಗಳಿಗೆ ಸಲಹೆ ನೀಡಲಾಗುತ್ತದೆ.
- ಪುಸ್ತಕ ವಿಮರ್ಶೆ ಆಯೋಜಿಸಲು ಘಟಕಗಳನ್ನು ಪ್ರೋತ್ಸಾಹಿಸಲಾಗುತ್ತದೆ.
- ಡಾಕ್ಯುಮೆಂಟರಿ ಕ್ಲಬ್‌ಗಳನ್ನು ಸ್ಥಾಪಿಸಲು ಘಟಕಗಳನ್ನು ಪ್ರೋತ್ಸಾಹಿಸಲಾಗುತ್ತದೆ.
- ಕಾರ್ಯಕರ್ತರನ್ನು ತಮ್ಮ ಪ್ರದೇಶದ ಪ್ರಾದೇಶಿಕ ಭಾಷೆಯಲ್ಲಿ ಪ್ರಾವೀಣ್ಯತೆ ಸಾಧಿಸಲು ಉತ್ತೇಜನ ನೀಡಲಾಗುವುದು.
- ಓದುವ ಆಸಕ್ತಿಯನ್ನು ಬೆಳೆಸುವ ಸಲುವಾಗಿ ಕಾದಂಬರಿಗಳು, ಗ್ರಾಫಿಕ್ ಗೈಡ್‌ಗಳು, ಕಾಮಿಕ್ಸ್ ಇತ್ಯಾದಿಗಳೊಂದಿಗೆ ಪ್ರಾರಂಭಿಸಲು ಕಾರ್ಯಕರ್ತರನ್ನು ಪ್ರೋತ್ಸಾಹಿಸಲಾಗುವುದು.

ಇಸ್ಲಾಮಿಕ್ ಚಿಂತನೆಯ ಬೆಳಕಿನಲ್ಲಿ ಎಸ್.ಐ.ಓ ಜೀವನದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಇಸ್ಲಾಮಿನ ಮಾದರಿಗಳು ಮತ್ತು ನಿರೂಪಣೆಗಳನ್ನು ರೂಪಿಸುತ್ತದೆ ಮತ್ತು ಅಭಿವೃದ್ಧಿಪಡಿಸುತ್ತದೆ, ವಿಷಯದ ತಯಾರಿಕೆ, ಪ್ರಚಾರ ಮತ್ತು ಪ್ರಸಾರದ ಮೇಲೆ ಗಮನ ಹರಿಸುತ್ತದೆ.

ಪ್ರತಿಯೊಂದು ಚಿಂತನೆ ಮತ್ತು ಸಿದ್ಧಾಂತದ ಹಿಂದೆ ಒಂದು ನಿರ್ದಿಷ್ಟ ದೃಷ್ಟಿಕೋನವಿದೆ. ಇಸ್ಲಾಂ ತನ್ನದೇ ಆದ ಜೀವನ ಮತ್ತು ವಿಶ್ವ ದೃಷ್ಟಿಕೋನವನ್ನು ಹೊಂದಿದೆ, ಅದರ ಮೂಲಕ ಜಗದ ಪ್ರಬಲ ಆಲೋಚನೆಗಳು ಮತ್ತು ಸಿದ್ಧಾಂತಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಲಾಗುತ್ತದೆ. ಏಕಕಾಲದಲ್ಲಿ, ಇಸ್ಲಾಮಿನ ಚಿಂತನೆಗೆ ಸಂಬಂಧಿಸಿದ ವಿದ್ವತ್ಪೂರ್ಣ ಮತ್ತು ಸಂಶೋಧನಾ ಪ್ರಯತ್ನಗಳೊಂದಿಗೆ ಪರಿಚಿತರಾಗಲು ಮತ್ತು ಈ ಪ್ರಯಾಣವನ್ನು ಮತ್ತಷ್ಟು

ಮುನ್ನಡೆಸಲು ಸಂಘಟನೆಯು ಸದಸ್ಯರಲ್ಲಿ ಉತ್ಸಾಹ ಮತ್ತು ಅಗತ್ಯ ಕೌಶಲ್ಯಗಳನ್ನು ಬೆಳೆಸಲು ಪ್ರಯತ್ನಗಳನ್ನು ಮಾಡಬೇಕು.

ಒಂದೆಡೆ, ಇಸ್ಲಾಮೀ ಚಿಂತನೆಯ ಪ್ರಾಥಮಿಕ ಮೂಲಗಳಾದ ಕುರಾನ್ ಮತ್ತು ಸುನ್ನತ್‌ಗಳ ಆಳವಾದ ತಿಳುವಳಿಕೆಯನ್ನು ಬೆಳೆಸುವತ್ತ ಪ್ರಯತ್ನಗಳು ಗಮನಹರಿಸಬೇಕು, ಜೊತೆಗೆ ವಿಶಾಲವಾದ ಇಸ್ಲಾಮಿನ ಜ್ಞಾನ ಸಂಪ್ರದಾಯವನ್ನು ಬೆಳೆಸಬೇಕು. ಮತ್ತೊಂದೆಡೆ, ಪ್ರಬಲ ನಿರೂಪಣೆಗಳು ಮತ್ತು ಸಿದ್ಧಾಂತಗಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಹಾಗೂ ಅವುಗಳ ಪರ್ಯಾಯಗಳನ್ನು ಉತ್ತಮವಾಗಿ ಪ್ರಸ್ತುತಪಡಿಸಲು ಸಮಕಾಲೀನ ಸಮಾಜ, ಅದರ ಭಾಷೆ ಮತ್ತು ಸಂವಾದದ ಆಳವಾದ ಅಧ್ಯಯನ ಕೈಗೊಳ್ಳಬೇಕು.

ಕಾರ್ಯಕ್ರಮಗಳು:

- ರಾಜ್ಯ ಮಟ್ಟದಲ್ಲಿ ಅಧ್ಯಯನ ಗುಂಪನ್ನು ಸ್ಥಾಪಿಸಲಾಗುವುದು.
- ರಾಜ್ಯವು ಸಲಹಾ ಸಮಿತಿಯ ಸದಸ್ಯರಿಗಾಗಿ ಅಧ್ಯಯನ ಶಿಬಿರವನ್ನು ಆಯೋಜಿಸುತ್ತದೆ.
- ರಾಜ್ಯವು ಇತರ ಇಸ್ಲಾಮಿಕ್ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಗಳೊಂದಿಗೆ ಅನ್ವೇಷಣೆ ಮತ್ತು ಸಹಯೋಗದ ಪ್ರಯತ್ನಗಳನ್ನು ಮಾಡಬೇಕು.

ಮಾರ್ಗಸೂಚಿಗಳು:

- ಘಟಕವು ಇಸ್ಲಾಮಿ ಚಿಂತನೆಯ ಬೆಳಕಿನಲ್ಲಿ ಅಧ್ಯಯನ ಗುಂಪಿನ ಸಂಪನ್ಮೂಲ ಬಳಸಿಕೊಂಡು ಕಾರ್ಯಕ್ರಮವನ್ನು ಆಯೋಜಿಸಬೇಕು.

ಎಸ್.ಐ.ಓ ವು ವಿದ್ಯಾರ್ಥಿಗಳು ಮತ್ತು ಯುವಜನರನ್ನು ಇಲ್ಲಿನ ದೇಶ ಬಾಂಧವರೊಂದಿಗೆ ತಮ್ಮ ಸಂಬಂಧವನ್ನು ಬಲಪಡಿಸಲು ಮತ್ತು ದಾಯಿ ಗುಣಲಕ್ಷಣಗಳನ್ನು ಉತ್ತೇಜಿಸಲು ನಿರಂತರವಾಗಿ ಶ್ರಮಿಸಲು ಪ್ರೋತ್ಸಾಹಿಸುತ್ತದೆ.

ಮುಸ್ಲಿಮ್ ಸಮುದಾಯದ ನಿಜವಾದ ಗುರುತು ಜನರನ್ನು ತಮ್ಮ ಸೃಷ್ಟಿಕರ್ತನೊಂದಿಗೆ ಸಂಪರ್ಕ ಸಾಧಿಸಲು ಆಹ್ವಾನಿಸುವ ಗುಂಪಿನಲ್ಲಿ ಅಡಗಿದೆ. ಈ ಮೂಲಭೂತ ಕರ್ತವ್ಯವನ್ನು ಪೂರೈಸಲು ಮುಸ್ಲಿಂ ಉಮ್ಮತ್ ತನ್ನ ಜವಾಬ್ದಾರಿಯ ಪ್ರಜ್ಞೆಯನ್ನು ಅರಿತುಕೊಳ್ಳುವುದು ಹಾಗೂ ಮಾತು ಮತ್ತು ಕ್ರಿಯೆಗಳ ಮೂಲಕ ಇಸ್ಲಾಂ ಧರ್ಮದ ನಿಜವಾದ ಚಿತ್ರಣವನ್ನು ಪ್ರಸ್ತುತಪಡಿಸುವುದು ಅತ್ಯಗತ್ಯ. ಆದ್ದರಿಂದ, ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳು ದಾವಾಹ್‌ನ ಸಾರವನ್ನು ಸ್ಪಷ್ಟವಾಗಿ ಮತ್ತು ಪ್ರಮುಖವಾಗಿ ಪ್ರತಿಬಿಂಬಿಸುವಂತೆ ವಿದ್ಯಾರ್ಥಿಗಳು ಮತ್ತು ಯುವಜನರಲ್ಲಿ ದಾಯಿ ಗುಣಲಕ್ಷಣಗಳನ್ನು ಬೆಳೆಸಬೇಕು. ದಾವಾವನ್ನು

ಮೂಲಭೂತ ಜವಾಬ್ದಾರಿ ಎಂದು ಗುರುತಿಸಿ, ಸಮುದಾಯದ ಪ್ರತಿಯೊಬ್ಬ ವ್ಯಕ್ತಿಯೂ ಆತ್ಮವಿಶ್ವಾಸ, ಬುದ್ಧಿವಂತಿಕೆ, ಉತ್ಸಾಹದಿಂದ ಹಾಗೂ ಸಾಕಷ್ಟು ಬೌದ್ಧಿಕ ಮತ್ತು ಪ್ರಾಯೋಗಿಕ ಸಿದ್ಧತೆಯೊಂದಿಗೆ ಪ್ರತಿ ರಂಗದಲ್ಲೂ ಇಸ್ಲಾಂ ಅನ್ನು ಪ್ರತಿನಿಧಿಸಬೇಕು.

ಇತ್ತೀಚಿನ ದಿನಗಳಲ್ಲಿ ದ್ವೇಷಪೂರಿತ ಪ್ರಚಾರ ಮತ್ತು ಪೂರ್ವಾಗ್ರಹದ ಮೂಲಕ ವಿವಿಧ ಸಮುದಾಯಗಳ ನಡುವೆ ಒಡಕು ಮೂಡಿಸಲು ಸಂಘಟಿತ ಮತ್ತು ವ್ಯವಸ್ಥಿತ ಪ್ರಯತ್ನಗಳು ನಡೆಯುತ್ತಿವೆ. ಜನರು ಮತ್ತು ಸಾಮಾಜಿಕ ಗುಂಪುಗಳ (ವಿವಿಧ ಜಾತಿ, ಧರ್ಮಗಳ) ನಡುವಿನ ಈ ಅಂತರವನ್ನು ಕಡಿಮೆ ಮಾಡುವುದು, ಪೂರ್ವಾಗ್ರಹವನ್ನು ತೊಡೆದುಹಾಕುವುದು ಹಾಗೂ ಪರಸ್ಪರ ನಂಬಿಕೆ, ಸಹಕಾರ ಮತ್ತು ಸಹಾನುಭೂತಿಯ ವಾತಾವರಣವನ್ನು ಬೆಳೆಸುವುದು ನಿರ್ಣಾಯಕವಾಗಿದೆ, ಇದು ದಾವಾಹ್ ದ ವ್ಯಾಪ್ತಿಯನ್ನು ವಿಸ್ತಾರಗೊಳಿಸುತ್ತದೆ.

ಕಾರ್ಯಕ್ರಮಗಳು:

- ರಾಜ್ಯವು ದಾವಾ ಕಾರ್ಯಾಗಾರವನ್ನು ಆಯೋಜಿಸುತ್ತದೆ.
- ದಾಯಿ ಗುಣಲಕ್ಷಣಗಳನ್ನು ಉತ್ತೇಜಿಸಲು "ಪ್ರವಾದಿ ಮುಹಮ್ಮದ್ (ಸ.ಅ.ಸ) ಅವರ ಬೋಧನೆಗಳಿಂದ ಪ್ರೇರಿತ" ಎಂಬ ಕಾರ್ಯಕ್ಕೆ ಜಿಲ್ಲೆಗಳು ನೇತೃತ್ವ ವಹಿಸಬೇಕು.

ನಿರ್ದಿಷ್ಟ ಸಾಮಾಜಿಕ–ಧಾರ್ಮಿಕ ಸಂದರ್ಭವನ್ನು ಪರಿಗಣಿಸಿ ಎಸ್.ಐ.ಓ ವು ಇಸ್ಲಾಮ್ ಧರ್ಮದ ಸತ್ಯತೆ ಮತ್ತು ಅಗತ್ಯವನ್ನು ಪ್ರಸ್ತುತಪಡಿಸುತ್ತದೆ.

ಇಸ್ಲಾಮ್ ಧರ್ಮದ ಸತ್ಯವನ್ನು ತಿಳಿಸುವಾಗ ಸಂವಾದಕನ ನಿರ್ದಿಷ್ಟ ಸಾಮಾಜಿಕ–ಧಾರ್ಮಿಕ ಸಂದರ್ಭವನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಅತ್ಯಗತ್ಯ. ನಮ್ಮ ವೈಯಕ್ತಿಕ ಸಂಪರ್ಕಗಳು ಮತ್ತು ಸಾಮೂಹಿಕ ಚಟುವಟಿಕೆಗಳು ಸಂವಾದಕಾರನಲ್ಲಿ ಇಸ್ಲಾಂ ಧರ್ಮವು ಆತನ ಅವಶ್ಯಕತೆ ಹಾಗೂ ಲೌಕಿಕ ಯಶಸ್ಸಿನ ಏಕೈಕ ಖಾತರಿ ಮತ್ತು ಪರಲೋಕದಲ್ಲಿ ಮೋಕ್ಷಕ್ಕೆ ದಾರಿ ಎಂದು ಭಾವಿಸುವಲ್ಲಿ ಪರಿಣಾಮ ಬೀರುತ್ತದೆ ಎಂಬ ಅಂಶಕ್ಕೆ ಗಮನ ಕೊಡುವುದು ಮುಖ್ಯ.

ದಾವಾಹ್‌ನ ಪ್ರಾಯೋಗಿಕ ಪ್ರಯತ್ನಗಳ ಜೊತೆಗೆ ಇಸ್ಲಾಮಿನ ಸೈದ್ಧಾಂತಿಕ ಚರ್ಚೆಯನ್ನು ವಿಶೇಷವಾಗಿ ಶೈಕ್ಷಣಿಕ ವಲಯಗಳು ಮತ್ತು ಕ್ಯಾಂಪಸ್‌ಗಳಲ್ಲಿ ಗಮನ ಹರಿಸಬೇಕು. ಇದಲ್ಲದೆ, ಭಾರತೀಯ ಸಮಾಜವನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಶೈಕ್ಷಣಿಕ ಮತ್ತು ಸಂಶೋಧನಾ ಕಾರ್ಯಗಳು ಅವಶ್ಯಕವಾಗಿದೆ, ಇದು ದಾವಾ ಚಟುವಟಿಕೆಗಳಿಗೆ ಸಹಾಯಕವಾಗಬಹುದು.

ಕಾರ್ಯಕ್ರಮಗಳು:

- ರಾಷ್ಟ್ರೀಯ ಮಟ್ಟದ ದಾವಾ ಅಭಿಯಾನವನ್ನು ಆಯೋಜಿಸಲಾಗುವುದು.
- ರಾಜ್ಯವು ಪ್ರಸ್ತುತ ಸಂದರ್ಭಕ್ಕನುಗುಣವಾಗಿ ದಾವಾಗೆ ವಿವಿಧ ವಿಧಾನಗಳ ಕುರಿತು ಅಧ್ಯಯನವನ್ನು ತೆಗೆದುಕೊಳ್ಳುತ್ತದೆ.
- ಸದಸ್ಯರು ತಮ್ಮ ಸ್ನೇಹಿತರು/ಸಹೋದ್ಯೋಗಿಗಳನ್ನು ತಮ್ಮ ಮನೆಗೆ ಆಹ್ವಾನಿಸಬೇಕು ಮತ್ತು ಅವರಿಗೆ ಆತಿಥ್ಯ ನೀಡಬೇಕು. (ನನ್ನ ಮನೆಗೆ ಭೇಟಿ ನೀಡಿ/ ಮೇರೆ ಘರ್ ಆಕೆ ತೋ ದೇಖೋ)

ಮಾರ್ಗಸೂಚಿಗಳು:

- ಘಟಕಗಳು ಕಾರ್ಯಕರ್ತರ ನಡುವೆ ಸಮಾಜ ಕಲ್ಯಾಣ ಚಟುವಟಿಕೆಗಳನ್ನು ಉತ್ತೇಜಿಸಬೇಕು ಮತ್ತು ಸಮುದಾಯದ ಸಕಾರಾತ್ಮಕ ಚಿತ್ರಣವನ್ನು ನಿರ್ಮಿಸುವ ಕೆಲಸ ಮಾಡಬೇಕು.
- ಮಸೀದಿ ದರ್ಶನ/ಮದ್ರಸಾ ಭೇಟಿ ಇತ್ಯಾದಿಗಳನ್ನು ಆಯೋಜಿಸಲು ಘಟಕಗಳನ್ನು ಪ್ರೋತ್ಸಾಹಿಸಲಾಗುತ್ತದೆ.
- ಅಂತರ್‌ಧರ್ಮೀಯ ಸಂವಾದಗಳನ್ನು ಆಯೋಜಿಸಲು, ಧಾರ್ಮಿಕ ಮುಖ್ಯಸ್ಥರನ್ನು ಭೇಟಿ ಮಾಡಲು, ಇತ್ಯಾದಿಗಳನ್ನು ಸಂಘಟಿಸಲು ಘಟಕಗಳನ್ನು ಪ್ರೋತ್ಸಾಹಿಸಲಾಗುತ್ತದೆ.
- ಸದಸ್ಯರು ಪ್ರಾದೇಶಿಕ ಭಾಷೆಗಳನ್ನು ಕಲಿಯಲು ಪ್ರೇರೇಪಿಸಲಾಗುವುದು.
- ಕಾರ್ಯಕರ್ತರು ತನ್ನ ಪ್ರಭಾವದ ಪ್ರದೇಶದಲ್ಲಿ ವೈಯಕ್ತಿಕ ದಾವಾ ಕೆಲಸವನ್ನು ಮಾಡಬೇಕು. ಪ್ರತಿಯೊಬ್ಬ ಸದಸ್ಯನು ಇಸ್ಲಾಂ ಧರ್ಮದ ಸಂದೇಶವನ್ನು ತಿಳಿಸಲು ಪ್ರಯತ್ನಿಸಬೇಕು (ಸಂದೇಶ ಪರಿಚಯ).
- ಸಾರ್ವಜನಿಕ ಮತ್ತು ಕಾಲೇಜು ಗ್ರಂಥಾಲಯಗಳಿಗೆ ಇಸ್ಲಾಮಿನ ಸಾಹಿತ್ಯವನ್ನು ಕೊಡುಗೆಯಾಗಿ ನೀಡಲು ಘಟಕಗಳನ್ನು ಪ್ರೋತ್ಸಾಹಿಸಲಾಗುತ್ತದೆ.

ಎಸ್.ಐ.ಓ ವು ವಿದ್ಯಾರ್ಥಿಗಳು ಮತ್ತು ಯುವಜನರ ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಸಾಮರ್ಥ್ಯ–ನಿರ್ಮಾಣದ ಮೇಲೆ ಗಮನ ಹರಿಸುತ್ತದೆ.

ಯಾವುದೇ ಸಾಮಾಜಿಕ ಚಳುವಳಿಯು ಯಶಸ್ವಿಯಾಗಲು ಅಧಿಕಾರದ ಕೇಂದ್ರಗಳಲ್ಲಿ ವಿಶೇಷವಾಗಿ ಶಿಕ್ಷಣ, ಆರ್ಥಿಕತೆ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ವಿಶಿಷ್ಟ ಸ್ಥಾನಗಳನ್ನು ಹೊಂದಿರುವ ಉನ್ನತ ಆಧ್ಯಾತ್ಮಿಕ ಮತ್ತು ನೈತಿಕ ಸ್ವಭಾವದ ವ್ಯಕ್ತಿಗಳನ್ನು ಹೊಂದಿರುವುದು ಕಡ್ಡಾಯವಾಗಿದೆ. ಸಾಮರ್ಥ್ಯ ವೃದ್ಧಿಯು ತಜ್ಞಿಯಾದ ವಿಶಾಲ ಪರಿಕಲ್ಪನೆಯ ಅವಿಭಾಜ್ಯ ಅಂಗವಾಗಿದೆ. ಈ ನಿಟ್ಟಿನಲ್ಲಿ ಎಸ್.ಐ.ಓ ವು ಅಗತ್ಯ

ತರಬೇತಿ ಮತ್ತು ಸಂಪನ್ಮೂಲಗಳನ್ನು ಒದಗಿಸುವ ಮೂಲಕ ತನ್ನ ಕಾರ್ಯಕರ್ತರ ಹಾಗೂ ವಿದ್ಯಾರ್ಥಿಗಳು ಮತ್ತು ಯುವಜನರ ಸಾಮರ್ಥ್ಯ ವೃದ್ಧಿಗಾಗಿ ಕೆಲಸ ಮಾಡುತ್ತದೆ. ಹೆಚ್ಚುವರಿಯಾಗಿ, ಇದು ಅವರಿಗೆ ಪರೋಪಕಾರಿ ಮನೋಭಾವವನ್ನು ಬೆಳೆಸಿಕೊಳ್ಳಲು, ಅವರ ಸಹಜ ಪ್ರತಿಭೆಯನ್ನು ಗುರುತಿಸಲು, ಅವುಗಳನ್ನು ಪೋಷಿಸಲು ಮತ್ತು ಅವುಗಳನ್ನು ಅರ್ಥಪೂರ್ಣವಾಗಿ ಬಳಸಲು ಪ್ರೇರೇಪಿಸುತ್ತದೆ. ಈ ಪ್ರಯತ್ನಗಳ ಮೂಲಕ ಗಳಿಸಿದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬಂಡವಾಳವು ಚಳುವಳಿ ಮತ್ತು ಸಮಾಜ ಎರಡಕ್ಕೂ ಅಮೂಲ್ಯವಾದ ಆಸ್ತಿಯಾಗಿ ಸಾಬೀತಾಗುತ್ತದೆ.

ಸಮಾಜದ ಶೈಕ್ಷಣಿಕ ಅಭಿವೃದ್ಧಿಯು ವೈವಿಧ್ಯಮಯ ಶಿಸ್ತುಗಳು ಮತ್ತು ವಿಚಾರಗಳೊಂದಿಗೆ ನಿರಂತರ ತೊಡಗಿಸಿಕೊಳ್ಳುವಿಕೆಯನ್ನು ಅವಲಂಬಿಸಿರುತ್ತದೆ. ಈ ನಿಟ್ಟಿನಲ್ಲಿ, ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಪ್ರಯಾಣದ ವಿವಿಧ ಹಂತಗಳಲ್ಲಿ ತಾಂತ್ರಿಕ ಕೌಶಲ್ಯ ಮತ್ತು ವೃತ್ತಿಪರ ಮಾರ್ಗದರ್ಶನ (ವೃತ್ತಿ ಸಮಾಲೋಚನೆ) ಪಡೆಯುವುದು ಅತ್ಯಗತ್ಯ, ಇದು ಶೈಕ್ಷಣಿಕ ಪ್ರಗತಿಯನ್ನು ಸಾಧಿಸಲು ಅನುವು ಮಾಡಿಕೊಡುತ್ತದೆ.

ಫ್ಲೇಮಿಂಗ್ ಅಕಾಡೆಮಿಯಾ ಯೋಜನೆಯಡಿಯಲ್ಲಿ, ಸಂಸ್ಥೆಯು ವಿಶ್ವವಿದ್ಯಾನಿಲಯಗಳು ಮತ್ತು ಪ್ರಮುಖ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶವನ್ನು ಸುಗಮಗೊಳಿಸುವ ದೃಷ್ಟಿಕೋನ ಮತ್ತು ತರಬೇತಿಯನ್ನು ನೀಡಲು ವಿವಿಧ ಹಂತಗಳಲ್ಲಿ ಶ್ರಮಿಸುತ್ತದೆ.

ವಿದ್ಯಾರ್ಥಿಗಳು ಮತ್ತು ಯುವಜನರಲ್ಲಿ ಆರ್ಥಿಕ ಸ್ವಾವಲಂಬನೆಯನ್ನು ಉತ್ತೇಜಿಸಲು ಹಾಗೂ ಇತರರಿಗೆ ಆರ್ಥಿಕ ಲಾಭದ ಮೂಲವಾಗಲು ಅವರನ್ನು ಸಕ್ರಿಯಗೊಳಿಸಲು ಉದ್ಯಮಶೀಲತೆಯ ಮನೋಭಾವ ಮತ್ತು ಕೌಶಲ್ಯಗಳನ್ನು ಬೆಳೆಸುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ, ಇನ್ಕ್ಯುಬೇಶನ್ ಸೆಂಟರ್‌ಗಳು, ಚೇಂಬರ್ಸ್ ಆಫ್ ಕಾಮರ್ಸ್ ಮತ್ತು ಸ್ವ–ಸಹಾಯ ಗುಂಪುಗಳಿಂದಲೂ ಬೆಂಬಲವನ್ನು ಪಡೆಯಬಹುದು.

ರಾಜಕೀಯ ಮತ್ತು ರಾಜಕೀಯ ಚಟುವಟಿಕೆಯ ಬಗ್ಗೆ ಸಾಮಾನ್ಯ ದೃಷ್ಟಿಕೋನವು ಹೆಚ್ಚಾಗಿ ಚುನಾವಣೆಗಳು ಮತ್ತು ಪಕ್ಷದ ಚಟುವಟಿಕೆಗಳಿಗೆ ಸೀಮಿತವಾಗಿರುತ್ತದೆ. ಇದು ಜೀವನದ ಸಂಕೀರ್ಣ ಕ್ಷೇತ್ರದ ಅತ್ಯಂತ ಕಿರಿದಾದ ತಿಳುವಳಿಕೆಯಾಗಿದೆ. ಈ ಸಂದರ್ಭದಲ್ಲಿ ಸಮಾಜದಲ್ಲಿನ ಅಧಿಕಾರದ ಕೇಂದ್ರಗಳು, ಅವುಗಳ ಪರಸ್ಪರ ಸಂಪರ್ಕಗಳು ಮತ್ತು ಇಡೀ ವ್ಯವಸ್ಥೆಯ ಕಾರ್ಯನಿರ್ವಹಣೆಯನ್ನು ಅರ್ಥಮಾಡಿಕೊಳ್ಳಲು ಗಮನಹರಿಸುವುದು ಅತ್ಯಗತ್ಯ. ಹೀಗಾಗಿ, ಒಬ್ಬರ ನಿಲುವಿನ ಪರವಾಗಿ ವಕಾಲತ್ತು ವಹಿಸುವುದು, ವಿವಿಧ ವ್ಯಕ್ತಿಗಳು ಮತ್ತು ಗುಂಪುಗಳೊಂದಿಗೆ ಸಹಯೋಗ ಮತ್ತು ಸಾರ್ವಜನಿಕ ಅಭಿಪ್ರಾಯವನ್ನು

ರೂಪಿಸುವಂತಹ ಕೌಶಲ್ಯಗಳನ್ನು ಬೆಳೆಸಲು ಪ್ರಯತ್ನಿಸಬೇಕು. ಜೀವನದ ವಿವಿಧ ಕ್ಷೇತ್ರಗಳಲ್ಲಿ ಸಾಮರ್ಥ್ಯ ವೃದ್ಧಿ ಮತ್ತು ಕೌಶಲ್ಯಗಳ ಅಭಿವೃದ್ಧಿಯು ಅಂತಿಮವಾಗಿ ಸಂಸ್ಥೆಯ ಪ್ರಭಾವದ ಕ್ಷೇತ್ರವನ್ನು ವಿಸ್ತರಿಸುತ್ತದೆ.

ಕಾರ್ಯಕ್ರಮಗಳು:

- ರಾಜ್ಯವು "ಫ್ರೇಮಿಂಗ್ ಅಕಾಡೆಮಿಯಾ ಪ್ರಾಜೆಕ್ಟ್" ನ ಭಾಗವಾಗಿ ಉನ್ನತ ಶಿಕ್ಷಣ ಅಭಿಯಾನವನ್ನು ಆಯೋಜಿಸುತ್ತದೆ.
- ರಾಜ್ಯವು ಶೈಕ್ಷಣಿಕ ಮತ್ತು ವೃತ್ತಿ ಬೆಂಬಲ ಕೋಶವನ್ನು ಬಲಪಡಿಸುತ್ತದೆ.
- ರಾಜ್ಯವು "ಡು ಇಟ್ ರೈಟ್" ಸರಣಿಯನ್ನು ಮುಂದುವರಿಸುತ್ತದೆ.
- ರಾಜ್ಯವು ಆಯ್ದ ಸದಸ್ಯರ ಒಟ್ಟಾರೆ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಕೋರ್ಸ್ ಅನ್ನು ಆಯೋಜಿಸುತ್ತದೆ.

ಮಾರ್ಗಸೂಚಿಗಳು:

- ಕೋರ್ಸ್ ಸಮಯದಲ್ಲಿ ಇಂಟರ್ನ್‌ಶಿಪ್ ಅವಕಾಶಗಳನ್ನು ಅನ್ವೇಷಿಸಲು ಕಾರ್ಯಕರ್ತರನ್ನು ಪ್ರೇರೇಪಿಸಲಾಗುತ್ತದೆ.
- ಘಟಕಗಳು ಉನ್ನತ ಶಿಕ್ಷಣ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬಹುದು.
- ರಾಜಕೀಯ ಸಬಲೀಕರಣದ ಅಂಶಗಳನ್ನು ಅನ್ವೇಷಿಸಲು ಕಾರ್ಯಕರ್ತರನ್ನು ಪ್ರೇರೇಪಿಸಲಾಗುವುದು.
- ಜಿಲ್ಲೆ/ಘಟಕವು ವಿವಿಧ ಕೌಶಲ್ಯ ಕೋರ್ಸ್ಗಳು ಮತ್ತು ಇಂಟರ್ನ್‌ಶಿಪ್ ಡ್ರೈವ್‌ಗಳನ್ನು ವಿವಿಧ ರಂಗಗಳ ಸಹಯೋಗದೊಂದಿಗೆ ಸುಗಮಗೊಳಿಸಬಹುದು.

ಸಾಮಾಜಿಕ ತೊಡಗಿಸಿಕೊಳ್ಳುವಿಕೆಯನ್ನು ಹೆಚ್ಚಿಸಲು, ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಮತ್ತು ಯುವಕರನ್ನು ತನ್ನ ಚಟುವಟಿಕೆಗಳಲ್ಲಿ ಒಳಗೊಳ್ಳಲು ಹಾಗೂ ಕಾರ್ಯಕರ್ತರ ಸಾಮರ್ಥ್ಯಗಳ ಪರಿಣಾಮಕಾರಿ ಬಳಕೆಯನ್ನು ಸುಗಮಗೊಳಿಸಲು ಎಸ್.ಐ.ಓ ವು ತನ್ನ ಕಾರ್ಯ–ಚಟುವಟಿಕೆಗಳಲ್ಲಿ ಸಂಸ್ಕೃತಿ ಮತ್ತು ಸಾಂಸ್ಥಿಕ ರಚನೆಯನ್ನು ವಿಸ್ತರಿಸಬೇಕು. ಈ ಉದ್ದೇಶಕ್ಕಾಗಿ, ಸಂಘಟನೆಯು ನೋಡ್‌ಗಳು ಮತ್ತು ಫೋರಮ್‌ಗಳನ್ನು ಸ್ಥಾಪಿಸುವ ಸಾಧ್ಯತೆಗಳು ಹಾಗೂ ಅವಕಾಶಗಳನ್ನು ಅನ್ವೇಷಿಸುತ್ತದೆ ಮತ್ತು ಆಯ್ದ ಕಾರ್ಯಕರ್ತರು ಈ ನಿಟ್ಟಿನಲ್ಲಿ ಉಪಕ್ರಮವನ್ನು ತೆಗೆದುಕೊಳ್ಳಲು ಪ್ರೇರೇಪಿಸಲಾಗುತ್ತದೆ.

ತನ್ನ ಗುರಿ ಮತ್ತು ಉದ್ದೇಶಗಳನ್ನು ಸಾಧಿಸಲು, ಎಸ್.ಐ.ಓ ವು ತನ್ನ ಸಾಂಸ್ಥಿಕ ರಚನೆ ಮತ್ತು ವಿಧಾನದಲ್ಲಿ ಒಳಗೊಳ್ಳುವಿಕೆಯನ್ನು ವಿಸ್ತರಿಸಬೇಕು ಮತ್ತು ಅಭಿವೃದ್ಧಿಪಡಿಸಬೇಕು. ಈ ನಿಟ್ಟಿನಲ್ಲಿ ಈಗಿರುವ ನೋಡುಗಳೊಂದಿಗೆ

ತೊಡಗಿಸಿಕೊಂಡು ಸಾಮಾಜಿಕ ಪ್ರಭಾವಕ್ಕೆ ದಾರಿ ಮಾಡಿಕೊಡುವ ಪ್ರಯತ್ನ ಮಾಡಲಾಗುವುದು. [ನೋಡ್‌ಗಳು: ವ್ಯಕ್ತಿಗಳು, ಗುಂಪುಗಳು, ವೇದಿಕೆಗಳು ಅಥವಾ ಕ್ಲಬ್‌ಗಳು ಪ್ರಾರಂಭಿಸಿದ ಉಪಕ್ರಮಗಳು] ಹಾಗೆಯೇ ಈ ದೃಷ್ಟಿಯನ್ನು ಸುಲಭಗೊಳಿಸಲು ಹೊಸ ನೋಡ್‌ಗಳನ್ನು ಸ್ಥಾಪಿಸುವುದು.

ರಾಜ್ಯವು ಮತ್ತು ಘಟಕಗಳು ಮೂಲಭೂತ ಸಾಂಸ್ಥಿಕ ಚಟುವಟಿಕೆಗಳು ಮತ್ತು ರಚನೆಯ ಮೇಲೆ ಪರಿಣಾಮ ಬೀರದಂತೆ ತಮ್ಮ ನಿರ್ದಿಷ್ಟ ಸಾಮರ್ಥ್ಯಗಳು, ಅವಕಾಶಗಳು ಮತ್ತು ಸಾಧ್ಯತೆಗಳ ಆಧಾರದ ಮೇಲೆ ಈ ವಿಧಾನವನ್ನು ಉತ್ತೇಜಿಸಲು ಶ್ರಮಿಸಬೇಕು. ಕಾರ್ಯಕರ್ತರು ತಮ್ಮ ಸಾಮರ್ಥ್ಯಗಳು, ಆಸಕ್ತಿಗಳು ಮತ್ತು ಒಲವುಗಳನ್ನು ಗಣನೆಗೆ ತೆಗೆದುಕೊಂಡು ವಿವಿಧ ನೋಡ್‌ಗಳಲ್ಲಿ ನಿರಂತರ, ವೈಯಕ್ತಿಕಗೊಳಿಸಿದ ಮತ್ತು ಉತ್ಪಾದಕ ಕೆಲಸದ ಮೇಲೆ ಗಮನ ಹರಿಸಬೇಕು. ಈ ನೋಡ್‌ಗಳ ಮೂಲಕ, ಸಾಮಾಜಿಕ ಸಂವಹನವನ್ನು ಹೆಚ್ಚಿಸಲು ಮತ್ತು ಸಂಘಟನೆಯ ವಿವಿಧ ಉದ್ದೇಶಗಳಿಗೆ ಸಹಾಯ ಮಾಡಲು ವಿದ್ಯಾರ್ಥಿಗಳು ಮತ್ತು ಯುವಜನರ ವಿಶಾಲ ನೆಲೆಯನ್ನು ತೊಡಗಿಸಿಕೊಳ್ಳಲು ಪ್ರಯತ್ನಗಳನ್ನು ಮಾಡಬೇಕು.

ಕಾರ್ಯಕ್ರಮಗಳು:

- ಸೆರಾ, ಸಂವೇದನಾ ಮತ್ತು ಇಂಕ್ ಡಬ್ಬಿ ಅನ್ನು ಬಲಪಡಿಸಲಾಗುವುದು.

ಮಾರ್ಗಸೂಚಿಗಳು:

- ರಾಜ್ಯವು ವಿವಿಧ ನೋಡ್‌ಗಳನ್ನು ಪ್ರಾರಂಭಿಸಲು ವ್ಯಕ್ತಿಗಳ ಮೇಲೆ ಗಮನ ಹರಿಸುತ್ತದೆ ಮತ್ತು ಪ್ರೋತ್ಸಾಹಿಸುತ್ತದೆ. ಈ ನಿಟ್ಟಿನಲ್ಲಿ ರಾಜ್ಯವು ತನ್ನ ಸಾಮರ್ಥ್ಯದಲ್ಲಿ ಕಾರ್ಯಕರ್ತರಿಗೆ ಸಹಾಯ ಮಾಡುತ್ತದೆ.
- ಮೂಲ ಸಂಘಟನಾತ್ಮಕ ಚಟುವಟಿಕೆ ಮತ್ತು ರಚನೆಯ ಮೇಲೆ ಪರಿಣಾಮ ಬೀರದಂತೆ ಹಾಗೂ ರಾಜ್ಯಾಧ್ಯಕ್ಷರ ಅನುಮೋದನೆಯೊಂದಿಗೆ ಸಾಮರ್ಥ್ಯ ಮತ್ತು ಸಾಧ್ಯತೆಗಳನ್ನು ಪರಿಗಣಿಸಿ ನೋಡ್‌ಗಳನ್ನು ರೂಪಿಸಲು ಘಟಕಗಳನ್ನು ಪ್ರೋತ್ಸಾಹಿಸಲಾಗುತ್ತದೆ.

ಆಯ್ದ ವಿದ್ಯಾರ್ಥಿಗಳು ಮತ್ತು ಸಂಸ್ಥೆಗಳ ಸಹಯೋಗದೊಂದಿಗೆ ಎಸ್.ಐ.ಓ. ವು ಜ್ಞಾನ, ಶಿಕ್ಷಣ ಮತ್ತು ಶಿಕ್ಷಣಶಾಸ್ತ್ರದ ಪ್ರಬಲ ತತ್ತ್ವಶಾಸ್ತ್ರದೊಂದಿಗೆ ವಿಮರ್ಶಾತ್ಮಕವಾಗಿ ತೊಡಗಿಸಿಕೊಳ್ಳಬೇಕು, ಇಸ್ಲಾಮಿನ ಜ್ಞಾನ ಮತ್ತು ಶಿಕ್ಷಣದ ತತ್ತ್ವಶಾಸ್ತ್ರವನ್ನು ರೂಪಿಸಲು, ಉತ್ತೇಜಿಸಲು ಮತ್ತು ಪ್ರಸಾರ ಮಾಡಲು ಶ್ರಮಿಸಬೇಕು.

ಇಸ್ಲಾಂ ಜ್ಞಾನ ಮತ್ತು ಶಿಕ್ಷಣದ ತತ್ತ್ವಶಾಸ್ತ್ರದ ಬಗ್ಗೆ ತನ್ನದೇ ಆದ ದೃಷ್ಟಿಕೋನವನ್ನು ಹೊಂದಿದೆ, ಇದು ಜೀವನ ಮತ್ತು ವಿಶ್ವದ ಸಮಗ್ರ ಪರಿಕಲ್ಪನೆಯ ವಿಸ್ತರಣೆಯಾಗಿದೆ. ಒಂದು ಸೈದ್ಧಾಂತಿಕ ಸಂಘಟನೆಯಾಗಿ ಪ್ರಸ್ತುತ ಶಿಕ್ಷಣ ಮತ್ತು ಶಿಕ್ಷಣ ವ್ಯವಸ್ಥೆಯನ್ನು ವಿಶ್ಲೇಷಿಸುವುದು ಮತ್ತು ಇಸ್ಲಾಮಿನ ತತ್ವಗಳ ಬೆಳಕಿನಲ್ಲಿ ಜ್ಞಾನವನ್ನು ರಚಿಸುವುದು ನಮ್ಮ ಪ್ರಾಥಮಿಕ ಜವಾಬ್ದಾರಿಯಾಗಿದೆ. ಆದ್ದರಿಂದ, ಈ ನಿಟ್ಟಿನಲ್ಲಿ ಸಂಶೋಧನೆ ಮತ್ತು ಶೈಕ್ಷಣಿಕ ಉಪಕ್ರಮಗಳನ್ನು ಕೈಗೊಳ್ಳುವುದು ಅತ್ಯಂತ ಮಹತ್ವದ್ದಾಗಿದೆ. ಈ ಉದ್ದೇಶಕ್ಕಾಗಿ, ಸಂಘಟನೆಯು ಅನುಕೂಲಕರ ವಾತಾವರಣವನ್ನು ಒದಗಿಸುವುದು ಹಾಗೂ ವ್ಯಕ್ತಿಗಳನ್ನು ಕಾರ್ಯಕ್ಕಾಗಿ ಸಿದ್ಧಪಡಿಸುವುದರ ಮೇಲೆ ಹರಿಸಬೇಕು ಮತ್ತು ಈ ಪ್ರಯತ್ನವನ್ನು ಶೈಕ್ಷಣಿಕ ಜೀವನದ ಭಾಗವಾಗಿಸಲು ಕಾರ್ಯಕರ್ತರನ್ನು ಪ್ರೋತ್ಸಾಹಿಸಬೇಕು. ಪ್ರಮುಖ ಸಂಸ್ಥೆಗಳಲ್ಲಿ ಇಸ್ಲಾಮಿನ ಜ್ಞಾನ ಮತ್ತು ಶಿಕ್ಷಣದ ತತ್ವಶಾಸ್ತ್ರವನ್ನು ಚರ್ಚಿತ ವಿಷಯವನ್ನಾಗಿ ಮಾಡಲು ಸಂಘಟನೆಯು ವ್ಯಕ್ತಿಗಳೊಂದಿಗೆ ಸಹಯೋಗದ ಪ್ರಯತ್ನ ಕೈಗೊಳ್ಳುವುದು.

ಕಾರ್ಯಕ್ರಮಗಳು:

- ರಾಜ್ಯವು ಜ್ಞಾನದ ಇಸ್ಲಾಮೀಕರಣ ಮತ್ತು ಶಿಕ್ಷಣದ ಇಸ್ಲಾಮಿನ ತತ್ವಶಾಸ್ತ್ರದ ಕುರಿತು ವಿಷಯವನ್ನು ಪ್ರಸಾರ ಮಾಡುತ್ತದೆ.
- ವಲಯವು ಸಹಯೋಗದೊಂದಿಗೆ ಶಿಕ್ಷಣ ಮಾದರಿಯನ್ನು ಅಭಿವೃದ್ಧಿಪಡಿಸುತ್ತದೆ.

ಶಿಕ್ಷಣದಲ್ಲಿ ಸಮತೆ, ಪ್ರವೇಶಸಾಧ್ಯತೆ ಮತ್ತು ಗುಣಮಟ್ಟತೆಯನ್ನು ಖಚಿತಪಡಿಸಿಕೊಳ್ಳಲು ಎಸ್.ಐ.ಓ ವು ಶ್ರಮಿಸುತ್ತದೆ ಮತ್ತು ಈ ನಿಟ್ಟಿನಲ್ಲಿ, ಅದು ಸರ್ಕಾರಿ ನೀತಿಗಳ ಮೇಲೆ ಪ್ರಭಾವ ಬೀರುತ್ತದೆ ಹಾಗೂ ಅದರ ವಾಣಿಜ್ಯೀಕರಣ, ಇತಿಹಾಸದ ತಪ್ಪಾಗಿ ಅರ್ಥೈಸುವಿಕೆ ಮತ್ತು ಪಠ್ಯಪುಸ್ತಕಗಳ ವಿರೂಪಗೊಳಿಸುವ ಸಮಸ್ಯೆಗಳನ್ನು ಪರಿಹರಿಸುತ್ತದೆ.

ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳ ಜೊತೆಗೆ ಶಿಕ್ಷಣ ಕ್ಷೇತ್ರವು ದೇಶದಲ್ಲಿ ಸಮಾನತೆಗಾಗಿ ಯಾವಾಗಲೂ ಹೋರಾಟವನ್ನು ನಡೆಸುತ್ತಾ ಬಂದಿದೆ.

ಶಿಕ್ಷಣ ಕ್ಷೇತ್ರದಲ್ಲಿ ಮುಸ್ಲಿಮರು ಮತ್ತು ಇತರ ಅಂಚಿನಲ್ಲಿರುವ ವರ್ಗಗಳ ವಿರುದ್ಧ ವ್ಯವಸ್ಥಿತ ದಬ್ಬಾಳಿಕೆ ಮತ್ತು ಅನ್ಯಾಯ ಮುಂದುವರೆದಿದೆ, ಇದರಲ್ಲಿ ಅವರನ್ನು ಉನ್ನತ ಶಿಕ್ಷಣದಿಂದ ಹೊರಗಿಡಲು ಉದ್ದೇಶಪೂರ್ವಕ ಪ್ರಯತ್ನಗಳು, ಅವರು ಶಿಕ್ಷಣದ ಅಲಭ್ಯತೆ ಮತ್ತು ಗುಣಮಟ್ಟ ಮತ್ತು ಸಮಾನ ಶಿಕ್ಷಣದ ಕೊರತೆ

ಸೇರಿವೆ. ಅಸ್ವಾಭಾವಿಕ ಸ್ಪರ್ಧಾತ್ಮಕ ವಾತಾವರಣವು ವಿದ್ಯಾರ್ಥಿ ಸಮುದಾಯದ ಮೇಲೆ ತೀವ್ರ ಪರಿಣಾಮ ಬೀರಿದೆ. ಈ ಸಮಸ್ಯೆಗಳನ್ನು ಪರಿಹರಿಸುವುದು ಉತ್ತಮ ಸಮಾಜವನ್ನು ಸೃಷ್ಟಿಸುವ ವಿಶಾಲ ಹೋರಾಟದ ಅತ್ಯಗತ್ಯ ಭಾಗವಾಗಿದೆ. ಅದೇ ರೀತಿ, ನೈತಿಕತೆ ಮತ್ತು ಮೌಲ್ಯಗಳನ್ನು ಹೆಚ್ಚಾಗಿ ನಿರ್ಲಕ್ಷಿಸಲಾಗುತ್ತದೆ, ಇದು ಶೈಕ್ಷಣಿಕ ವ್ಯವಸ್ಥೆಯಲ್ಲಿ ಅನೈತಿಕ ಅಂಶಗಳ ಒಳನುಸುಳುವಿಕೆಗೆ ಕಾರಣವಾಗುತ್ತದೆ. ಪಠ್ಯಕ್ರಮದ ಮೂಲಕ ನಿರ್ದಿಷ್ಟ ಸಾಂಸ್ಕೃತಿಕ ಸಿದ್ಧಾಂತಗಳನ್ನು ಹೇರಲು ಮತ್ತು ದ್ವೇಷವನ್ನು ಹರಡಲು ವ್ಯವಸ್ಥಿತ ಪ್ರಯತ್ನಗಳು ನಡೆಯುತ್ತಿವೆ, ಇದನ್ನು ಪರಿಹರಿಸಬೇಕು. ಈ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು, ಎಸ್.ಐ.ಓ ವು ಅಸ್ತಿತ್ವದಲ್ಲಿರುವ ಶೈಕ್ಷಣಿಕ ಸಂವಾದಗಳನ್ನು ಪ್ರಶ್ನಿಸಲು, ರಾಷ್ಟ್ರೀಯ ಶೈಕ್ಷಣಿಕ ಕಾರ್ಯಸೂಚಿಗಳು ಹಾಗೂ ನೀತಿಗಳ ಮೇಲೆ ಪ್ರಭಾವ ಬೀರಲು ಮತ್ತು ಅದರ ಸದಸ್ಯರು ತಮ್ಮ ಪಠ್ಯಕ್ರಮದ ವಿಮರ್ಶಾತ್ಮಕ ತಿಳುವಳಿಕೆಯನ್ನು ಬೆಳೆಸಿಕೊಳ್ಳುವ ಸಾಮರ್ಥ್ಯವನ್ನು ಸಜ್ಜುಗೊಳಿಸಲು ಬದ್ಧವಾಗಿದೆ.

ಕಾರ್ಯಕ್ರಮಗಳು:

- ರಾಜ್ಯವು ಆರ್.ಟಿ.ಇ(RTE) ಯೋಜನೆಯ ಕೆಲಸವನ್ನು ಮುಂದುವರಿಸುತ್ತದೆ.
- ಜಿಲ್ಲೆಗಳು ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ಪರಿಹರಿಸಲು ಪ್ರಯತ್ನಿಸಬೇಕು, ಈ ನಿಟ್ಟಿನಲ್ಲಿ ರಾಜ್ಯವು ಮಾರ್ಗದರ್ಶನ ನೀಡುವುದು.
- ರಾಜ್ಯವು ಕರ್ನಾಟಕದಲ್ಲಿನ ಮುಸ್ಲಿಮರ ಕೊಡುಗೆಯ ಸಂಶೋಧನೆ ಮತ್ತು ಪ್ರಕಟಣೆಯನ್ನು ಮುಂದುವರಿಸುತ್ತದೆ.
- ರಾಜ್ಯ ಶಿಕ್ಷಣ ನೀತಿಗೆ ಸಂಬಂಧಿಸಿದಂತೆ ರಾಜ್ಯವು ಅಗತ್ಯಕ್ಕೆ ಅನುಗುಣವಾಗಿ ತೊಡಗಿಸಿಕೊಳ್ಳುತ್ತದೆ ಮತ್ತು ಅನುಸರಿಸುತ್ತದೆ.
- ರಾಜ್ಯವು ಯುಯುಸಿಎಂಎಸ್ (UUCMS) ಸಾಫ್ಟ್‌ವೇರ್ ಸಮಸ್ಯೆಯನ್ನು ಪರಿಹರಿಸುತ್ತದೆ.

ಮಾರ್ಗಸೂಚಿಗಳು:

- ರಾಜ್ಯವು ಕಾರ್ಯಕರ್ತರಲ್ಲಿ ವಿದ್ಯಾರ್ಥಿವೇತನ, ಪ್ರವೇಶಗಳು ಮತ್ತು ಪ್ರಮುಖ ಇಂಟರ್ನ್‌ಶಿಪ್‌ಗಳ ಕುರಿತು ನವೀಕರಣಗಳನ್ನು ಪ್ರಸಾರ ಮಾಡುತ್ತದೆ.
- ರಾಜ್ಯವು ಇತರ ಅಲ್ಪಸಂಖ್ಯಾತ ಸಂಸ್ಥೆಗಳೊಂದಿಗೆ ಸಹಯೋಗದ ಅವಕಾಶಗಳನ್ನು ಅನ್ವೇಷಿಸುತ್ತದೆ

ಎಸ್.ಐ.ಓ ವು ವಿಶ್ವವಿದ್ಯಾನಿಲಯಗಳು ಮತ್ತು ವೃತ್ತಿಪರ ಕ್ಯಾಂಪಸ್‌ಗಳಲ್ಲಿ ಉತ್ತಮ ನೈತಿಕ ಮತ್ತು ಪ್ರಜಾಪ್ರಭುತ್ವ ವಾತಾವರಣವನ್ನು ಉತ್ತೇಜಿಸಬೇಕು, ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಕಲ್ಪನೆ, ಕ್ಯಾಂಪಸ್ ಸಂಸ್ಕೃತಿ ಮತ್ತು ಶೈಕ್ಷಣಿಕ ಸಂವಾದದೊಂದಿಗೆ ತೊಡಗಿಸಿಕೊಳ್ಳುವಂತೆ ಪ್ರಭಾವ ಬೀರಬೇಕು.

ತೆಹ್ರೀಕ್–ಇ–ಇಸ್ಲಾಮಿಯ ಹೋರಾಟದ ಪ್ರಮುಖ ಸ್ಥಳಗಳು ಕ್ಯಾಂಪಸ್‌ಗಳಾಗಿವೆ. ವಿಶ್ವವಿದ್ಯಾಲಯಗಳು ಮತ್ತು ವೃತ್ತಿಪರ ಕ್ಯಾಂಪಸ್‌ಗಳಲ್ಲಿ, ಆ ಕ್ಷಣದ ಕನಸು ಕಾಣುವ ಸಾಮಾಜಿಕ ಬದಲಾವಣೆಯನ್ನು ತರಲು ಶೈಕ್ಷಣಿಕ ಮತ್ತು ಸೈದ್ಧಾಂತಿಕ ಪ್ರಯತ್ನಗಳನ್ನು ಮಾಡಬೇಕು. ಈ ನಿಟ್ಟಿನಲ್ಲಿ, ಎಸ್.ಐ.ಓ ವು ವಿದ್ಯಾರ್ಥಿಗಳು ಶೈಕ್ಷಣಿಕ ಅಂಕಗಳು ಮತ್ತು ಕ್ಯಾಂಪಸ್ ಸಂಸ್ಕೃತಿಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರಭಾವ ಬೀರಲು ಪ್ರಯತ್ನಿಸುತ್ತದೆ. ಇದು ಇಸ್ಲಾಮಿನ ದೃಷ್ಟಿಕೋನದಿಂದ ವಿಶ್ವವಿದ್ಯಾಲಯ, ಜ್ಞಾನ ಮತ್ತು ಶಿಕ್ಷಣದ ಕಲ್ಪನೆಯನ್ನು ಸಹ ತಿಳಿಸುತ್ತದೆ.

ಇಸ್ಲಾಂ ಧರ್ಮದ ನೈತಿಕ ಮತ್ತು ನೈತಿಕ ಮೌಲ್ಯಗಳನ್ನು ಆಧರಿಸಿದ ವಿವಿಧ ಚಟುವಟಿಕೆಗಳ ಮೂಲಕ ಕ್ಯಾಂಪಸ್ ಸಂಸ್ಕೃತಿಯ ಮೇಲೆ ಪ್ರಭಾವ ಬೀರಲು ಎಸ್.ಐ.ಓ ವು ಶ್ರಮಿಸುತ್ತದೆ. ವೃತ್ತಿಪರ ಮತ್ತು ಸ್ಟೆಮ್ ಕ್ಯಾಂಪಸ್‌ಗಳಿಗೆ ವಿಶೇಷ ಗಮನ ನೀಡಲಾಗುವುದು ಮತ್ತು ಅಲ್ಲಿನ ವಿದ್ಯಾರ್ಥಿಗಳ ನಿರ್ದಿಷ್ಟ ಅಗತ್ಯಗಳನ್ನು ಪರಿಗಣಿಸಿ ಉತ್ತಮ ಕ್ರಮವನ್ನು ಪ್ರಸ್ತುತಪಡಿಸಲು ಪ್ರಯತ್ನಿಸಲಾಗುವುದು.

ಕ್ಯಾಂಪಸ್‌ನಲ್ಲಿ ಪ್ರಜಾಸತ್ತಾತ್ಮಕ ವಾತಾವರಣ ಅತ್ಯಗತ್ಯ. ಸಮಾನತೆ, ನ್ಯಾಯ ಮತ್ತು ಗುಣಮಟ್ಟದ ಶಿಕ್ಷಣವನ್ನು ಖಚಿತಪಡಿಸಿಕೊಳ್ಳಲು ಎಸ್.ಐ.ಓ ವು ಶ್ರಮಿಸುತ್ತದೆ ಮತ್ತು ಕ್ಯಾಂಪಸ್‌ಗಳಲ್ಲಿ ಪ್ರಜಾಪ್ರಭುತ್ವದ ವಾತಾವರಣವನ್ನು ಪುನಃಸ್ಥಾಪಿಸಲು ಕೆಲಸ ಮಾಡುತ್ತದೆ. ಹೆಚ್ಚುವರಿಯಾಗಿ, ಇದು ಶೈಕ್ಷಣಿಕ ಮತ್ತು ಕ್ಯಾಂಪಸ್ ಸಮಸ್ಯೆಗಳನ್ನು ಪರಿಹರಿಸುತ್ತದೆ, ಬೌದ್ಧಿಕ ಮತ್ತು ಸೈದ್ಧಾಂತಿಕ ದೃಷ್ಟಿಕೋನಗಳಿಂದ ಅದರ ನಿರೂಪಣೆಯನ್ನು ರೂಪಿಸುತ್ತದೆ.

ಕಾರ್ಯಕ್ರಮಗಳು:

- ರಾಜ್ಯವು ತೆಹ್ರೀಕಿ ಜನರು ನಡೆಸುವ ಸಂಸ್ಥೆಗಳ ಮೇಲೆ ಗಮನ ಹರಿಸುತ್ತದೆ ಮತ್ತು ಕ್ಯಾಂಪಸ್ ಘಟಕವನ್ನು ಸ್ಥಾಪಿಸುತ್ತದೆ.
- ಸಾಮಾಜಿಕ ಕಲ್ಯಾಣ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ ಕ್ಯಾಂಪಸ್ ಘಟಕಗಳನ್ನು ಬಲಪಡಿಸಬೇಕು.
- ರಾಜ್ಯವು ಕ್ಯಾಂಪಸ್ ಕಾರ್ಯಾಗಾರವನ್ನು ಆಯೋಜಿಸುತ್ತದೆ
- ಕ್ಯಾಂಪಸ್ ಉಪನ್ಯಾಸಕ್ಕೆ ಇರುವ ಅವಕಾಶಗಳನ್ನು ರಾಜ್ಯವು ಅನ್ವೇಷಿಸುತ್ತದೆ.

ಮಾರ್ಗಸೂಚಿಗಳು:

- ರಾಜ್ಯವು ಸಮಾನತೆ, ನ್ಯಾಯ ಮತ್ತು ಗುಣಮಟ್ಟದ ಶಿಕ್ಷಣವನ್ನು ಖಚಿತಪಡಿಸಿಕೊಳ್ಳಲು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಪ್ರಜಾಪ್ರಭುತ್ವ ವಾತಾವರಣವನ್ನು ಪುನಃಸ್ಥಾಪಿಸಲು ಶ್ರಮಿಸುತ್ತದೆ
- ಸದಸ್ಯರು ತಮ್ಮ ಸಂಸ್ಥೆಗಳಲ್ಲಿ ಪರಿಸರ, ಸಾಮಾಜಿಕ ಮತ್ತು ತಾಂತ್ರಿಕ ಕ್ಲಬ್‌ಗಳೊಂದಿಗೆ ಸಕ್ರಿಯವಾಗಿ ಭಾಗವಹಿಸಲು ಮತ್ತು ಸಹಕರಿಸಲು ಪ್ರೋತ್ಸಾಹಿಸಲಾಗುತ್ತದೆ.
- ಸದಸ್ಯರು ಸ್ಟ್ಯಾಂಡ್ ಅಪ್ ಕಾಮಿಡಿ, ಸ್ಲ್ಯಾಮ್ ಕಾವ್ಯ ಇತ್ಯಾದಿ ಸಾಂಸ್ಕೃತಿಕ ಸಾಧನಗಳನ್ನು ಬಳಸಿಕೊಂಡು ಸಂವೇದನಾಶೀಲರಾಗಲು ಮತ್ತು ಜಾಗೃತಿ ಮೂಡಿಸಲು ಶ್ರಮಿಸಲು ಮತ್ತು ವಿವಿಧ ಸಾಮಾಜಿಕ ಸಮಸ್ಯೆಗಳು, ಶೈಕ್ಷಣಿಕ ಸಮಸ್ಯೆಗಳು, ಪ್ರಜಾಪ್ರಭುತ್ವದ ವಾತಾವರಣದ ಪುನಃಸ್ಥಾಪನೆ ಇತ್ಯಾದಿಗಳನ್ನು ಪ್ರೋತ್ಸಾಹಿಸಲಾಗುತ್ತದೆ.
- ನಮ್ಮ ಕಾರ್ಯಕರ್ತರು ಸಂರಕ್ಷಿಸಲ್ಪಟ್ಟಿರುವ ಎಲ್ಲಾ ಕ್ಯಾಂಪಸ್‌ಗಳಲ್ಲಿ ಸಮಾಜ ಕಲ್ಯಾಣ ಚಟುವಟಿಕೆಗಳ ಮೂಲಕ ಘಟಕವು ಎಸ್.ಐ.ಓ ಅನ್ನು ಪರಿಚಯಿಸಬೇಕು.

ಎಸ್.ಐ.ಓ ವು ದೀನಿ ಮದರಸಾ ವಿದ್ಯಾರ್ಥಿಗಳು ಮತ್ತು ಪದವೀಧರರ ಬಗ್ಗೆ ವಿಶೇಷ ಗಮನ ನೀಡಬೇಕು, ಅವರ ಸಾಮರ್ಥ್ಯವನ್ನು ಬಳಸಿಕೊಳ್ಳಲು ಶ್ರಮಿಸಬೇಕು. ಅವರು ಸಾಮಾಜಿಕ ಸಮಸ್ಯೆಗಳಲ್ಲಿ ತೊಡಗಿಸಿಕೊಂಡಿರಲು ಸಾಧ್ಯವಾಗುವಂತೆ ಅವರ ಸಾಮರ್ಥ್ಯಗಳನ್ನು ಪೋಷಿಸಲು ಪ್ರಯತ್ನಿಸಬೇಕು. ಹೆಚ್ಚುವರಿಯಾಗಿ, ಸಂಘಟನೆಯು ಉಪಖಂಡದ ಶ್ರೀಮಂತ ಇಸ್ಲಾಮಿನ ಬೌದ್ಧಿಕ ಸಂಪ್ರದಾಯಗಳೊಂದಿಗೆ ತೊಡಗಿಸಿಕೊಳ್ಳಬೇಕು.

ದೀನಿ ಮದಾರಿಸ್ ಗಳು ಭಾರತೀಯ ಮುಸ್ಲಿಮರ ಇತಿಹಾಸದಲ್ಲಿ ಒಂದು ಅದ್ಭುತ ಅಧ್ಯಾಯವನ್ನು ಪ್ರತಿನಿಧಿಸುತ್ತವೆ ಮತ್ತು ಅಲ್ಲಿನ ವಿದ್ಯಾರ್ಥಿಗಳು ಸಮುದಾಯಕ್ಕೆ ಅಮೂಲ್ಯವಾದ ಆಸ್ತಿಯಾಗಿದ್ದಾರೆ. ಮದರಸಾ ವಿದ್ಯಾರ್ಥಿಗಳ ಪ್ರತಿಭೆಯನ್ನು ಬಳಸಿಕೊಳ್ಳುವುದು ಮತ್ತು ಅವರನ್ನು ಸಾಮಾಜಿಕ ಸಮಸ್ಯೆಗಳೊಂದಿಗೆ ತೊಡಗಿಸಿಕೊಳ್ಳುವುದು, ಸಮಾಜದ ಪುನರ್ನಿರ್ಮಾಣಕ್ಕೆ ಸಿದ್ಧಪಡಿಸುವುದು ಸಂಘಟನೆಯ ಆದ್ಯತೆಯಾಗಿರಬೇಕು. ಈ ನಿಟ್ಟಿನಲ್ಲಿ ಇಸ್ಲಾಮಿಕ್ ಚಳುವಳಿಗೆ ಸಂಬಂಧಿಸಿದ ಸೆಮಿನರಿಗಳ ವಿದ್ಯಾರ್ಥಿಗಳಿಗೆ ವಿಶೇಷ ಗಮನ ನೀಡಲಾಗುವುದು. ಉಪಖಂಡದ ಇತಿಹಾಸವು ಶ್ರೇಷ್ಠ ನ್ಯಾಯಶಾಸ್ತ್ರಜ್ಞರು ಮತ್ತು ಗೌರವಾನ್ವಿತ ವಿದ್ವಾಂಸರ ಅಮೂಲ್ಯವಾದ ವಿದ್ವತ್ಪೂರ್ಣ ಪರಂಪರೆಯ ನಿಧಿಯಾಗಿದೆ. ಈ ಬೌದ್ಧಿಕ ಪರಂಪರೆಯು 1400 ವರ್ಷಗಳ ಇಸ್ಲಾಮಿಕ್ ಪಾಂಡಿತ್ಯದ ಇತಿಹಾಸದ ಹೆಮ್ಮೆಯ

ಭಾಗವಾಗಿದೆ. ಈ ವಿದ್ವತ್ಪೂರ್ಣ ಸಂಪ್ರದಾಯಗಳಿಂದ ಪ್ರಯೋಜನ ಪಡೆಯುವುದು ಮತ್ತು ಅವರೊಂದಿಗೆ ತೊಡಗಿಸಿಕೊಳ್ಳುವುದು ಸಹ ಸಂಘಟನೆಯ ಪ್ರಯತ್ನಗಳ ಭಾಗವಾಗಿರುತ್ತದೆ.

ಕಾರ್ಯಕ್ರಮಗಳು:

- ರಾಜ್ಯವು ದೀನಿ ಮದರಾಸ್‌ನ ಪಠ್ಯಕ್ರಮದ ಬಗ್ಗೆ ಸಂಶೋಧನೆ ನಡೆಸಬೇಕು ಮತ್ತು ಅವರ ಬೌದ್ಧಿಕ ಪ್ರವಚನವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು.
- ದೀನಿ ಮದರಸಾ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲು ಮತ್ತು ಉನ್ನತ ಶಿಕ್ಷಣದ ಅವಕಾಶಗಳನ್ನು ಸಂಯೋಜಿಸಲು ರಾಜ್ಯವು ಅನ್ವೇಷಿಸುತ್ತದೆ.
- ಎಸ್.ಐ.ಓ ವು ನಿಯಮಿತ ಭೇಟಿಗಳೊಂದಿಗೆ ಸೆಮಿನರಿ ವಿದ್ಯಾರ್ಥಿಗಳೊಂದಿಗೆ ತೊಡಗಿಸಿಕೊಳ್ಳುತ್ತದೆ ಮತ್ತು ಅವರೊಂದಿಗೆ ಪ್ರಯೋಜನಕಾರಿ ಸಂಬಂಧವನ್ನು ಬೆಳೆಸಲು ಶ್ರಮಿಸುತ್ತದೆ.

ಮಾರ್ಗಸೂಚಿಗಳು:

- ಜಿಲ್ಲೆಗಳು ದೀನಿ ಮದರಸಾದಲ್ಲಿ ಸ್ಪರ್ಧೆ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಪಿಕ್ನಿಕ್‌ಗಳು ಮುಂತಾದ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೋತ್ಸಾಹಿಸಲಾಗುತ್ತದೆ.
- ಎಸ್.ಐ.ಓ ಮರ್ಕಜ್ ಆಯೋಜಿಸಿರುವ ಇಸ್ತೆದಾದ್ ಸರಣಿಯ ಅತ್ಯುತ್ತಮ ಬಳಕೆಯನ್ನು ಮಾಡಿಕೊಳ್ಳಲು ಘಟಕಗಳಿಗೆ ಸೂಚಿಸಲಾಗಿದೆ.
- ದೀನಿ ಮದಾರಿಸ್ ವಿದ್ಯಾರ್ಥಿಗಳಿಗೆ ಮದರಸಾ ಶುಚಿಗೊಳಿಸುವಿಕೆ, ವೃತ್ತಿಪರ ತರಬೇತಿ, ಕಂಪ್ಯೂಟರ್ ತರಬೇತಿ, ಭಾಷಾ ಬೋಧನೆ ಮುಂತಾದ ಕಲ್ಯಾಣ ಚಟುವಟಿಕೆಗಳನ್ನು ಕೈಗೊಳ್ಳಬಹುದು.
- NIOS ಮೂಲಕ 10 ಮತ್ತು 12 ನೇ ತರಗತಿಯ ಪರೀಕ್ಷೆಗಳಿಗೆ ಹಾಜರಾಗಲು ದೀನಿ ಮದರಸಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ಘಟಕಗಳನ್ನು ಪ್ರೋತ್ಸಾಹಿಸಲಾಗುತ್ತದೆ.
- ದೀನಿ ಮದರಸಾದ ವಿದ್ಯಾರ್ಥಿಗಳಿಗೆ ತೆಹ್ರೀಕಿ ಜರ್ನಲ್‌ಗಳು ಮತ್ತು ನಿಯತಕಾಲಿಕೆಗಳನ್ನು ಪ್ರಚಾರ ಮತ್ತು ವಿತರಿಸಲು ಘಟಕಗಳಿಗೆ ಸೂಚಿಸಲಾಗಿದೆ.
- ಜಿಲ್ಲೆಗಳು/ಘಟಕಗಳು ದೀನಿ ಮದರಸಾ ವಿದ್ಯಾರ್ಥಿಗಳಿಗೊಂದಿಗೆ ಪ್ರಯೋಜನಕಾರಿ ಸಂಬಂಧವನ್ನು ನಿರ್ಮಿಸಲು ಶ್ರಮಿಸಬೇಕು (ನಮ್ಮ ಕಾರ್ಯಕ್ರಮದಲ್ಲಿ ಅವರನ್ನು ಸಂಪನ್ಮೂಲ ವ್ಯಕ್ತಿಯಾಗಿ ಆಹ್ವಾನಿಸುವುದು)

ಸಮಾಜದಲ್ಲಿ ನ್ಯಾಯವನ್ನು ಸ್ಥಾಪಿಸಲು ಎಸ್.ಐ.ಓ ವು ವಿದ್ಯಾರ್ಥಿಗಳು ಮತ್ತು ಯುವಜನರ ಮೇಲೆ ಪ್ರಭಾವ ಬೀರಬೇಕು. ಇದನ್ನು ಸಾಧಿಸಲು ಮುಸ್ಲಿಮರು ಮತ್ತು ಇತರ ಅಂಚಿನಲ್ಲಿರುವ ಸಮುದಾಯಗಳ ಹಕ್ಕುಗಳನ್ನು ರಕ್ಷಿಸಲು ಸಾಮೂಹಿಕ ಪ್ರಯತ್ನಗಳನ್ನು ಮಾಡಬೇಕು.

ಇತ್ತೀಚಿನ ವರ್ಷಗಳಲ್ಲಿ, ವ್ಯವಸ್ಥಿತ ಮಾನವ ಹಕ್ಕುಗಳ ಉಲ್ಲಂಘನೆಯ ಮೂಲಕ ಭಯ ಮತ್ತು ಹತಾಶೆಯ ವಾತಾವರಣವನ್ನು ಸೃಷ್ಟಿಸುವ ನಿರಂತರ ಪ್ರಯತ್ನಗಳು ನಡೆದಿವೆ. ಮುಸ್ಲಿಮರು ಮತ್ತು ಸಮಾಜದ ಇತರ ಅಂಚಿನಲ್ಲಿರುವ ವರ್ಗಗಳ ಶೈಕ್ಷಣಿಕ, ಸಾಮಾಜಿಕ ಮತ್ತು ಪೌರತ್ವ ಸ್ಥಾನಮಾನವನ್ನು ದುರ್ಬಲಗೊಳಿಸುವ ನಿರಂತರ ಪ್ರಯತ್ನಗಳು ಅತ್ಯಂತ ಕಳವಳಕಾರಿಯಾಗಿದೆ.

ಅಲ್ಪಸಂಖ್ಯಾತರ ಮೇಲೆ, ವಿಶೇಷವಾಗಿ ಮುಸ್ಲಿಮರ ಮೇಲೆ ಹಿಂಸಾಚಾರದ ಘಟನೆಗಳು; ಹಿಜಾಬ್ ಮತ್ತು ಮಸೀದಿ, ಚರ್ಚ್‌ಗಳಂತಹ ಧಾರ್ಮಿಕ ಚಿಹ್ನೆಗಳ ಮೇಲಿನ ದಾಳಿಗಳು; ಬುಲ್ಡೋಜರ್; ಮತ್ತು ಅಲ್ಪಸಂಖ್ಯಾತ ಧರ್ಮಗಳಿಗೆ ಮತಾಂತರಗೊಂಡ ಹೊಸಬರಲ್ಲಿ ಭಯ ಹುಟ್ಟಿಸಲು ಕಾನೂನುಗಳನ್ನು ರಚಿಸುವುದು ಸೇರಿದಂತೆ ಬಹುತೇಕ ಪ್ರಯತ್ನಗಳೆಲ್ಲವೂ ಆಕಸ್ಮಿಕ ಘಟನೆಗಳಲ್ಲ, ಬದಲಾಗಿ, ಅವು ಈ ಸಮುದಾಯಗಳನ್ನು ಮತ್ತಷ್ಟು ಅಂಚಿನಲ್ಲಿಡುವ ಯೋಜಿತ ಮತ್ತು ವ್ಯವಸ್ಥಿತ ಪ್ರಯತ್ನದ ಭಾಗವಾಗಿದೆ.

ಈ ನಿಟ್ಟಿನಲ್ಲಿ, ಎಸ್.ಐ.ಓ ವು ವಿದ್ಯಾರ್ಥಿಗಳು ಮತ್ತು ಯುವಜನರನ್ನು ಇಸ್ಲಾಂ ತತ್ವಗಳಿಂದ ಮಾರ್ಗದರ್ಶಿಸಲ್ಪಟ್ಟ ಈ ಸವಾಲುಗಳನ್ನು ಎದುರಿಸಲು ಪ್ರೇರೇಪಿಸುತ್ತದೆ. ಇದಲ್ಲದೆ, ಎಸ್.ಐ.ಓ ವು ಸಂಶೋಧನೆ ಮತ್ತು ವಕಾಲತ್ತುಗಳಲ್ಲಿ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಬೇಕು, ನ್ಯಾಯವನ್ನು ಬಯಸುವ ಗುಂಪುಗಳೊಂದಿಗೆ ದೀರ್ಘಕಾಲೀನ ಸಹಯೋಗದ ಪ್ರಯತ್ನಗಳ ಕಡೆಗೆ ಕೆಲಸ ಮಾಡಬೇಕು ಮತ್ತು ವಿವಿಧ ಪಾಲುದಾರರೊಂದಿಗೆ ತೊಡಗಿಸಿಕೊಳ್ಳಬೇಕು.

ಧಾರ್ಮಿಕ ಅಲ್ಪಸಂಖ್ಯಾತರ ರಕ್ಷಣೆ ಮತ್ತು ಧಾರ್ಮಿಕ ಸ್ವಾತಂತ್ರ್ಯದ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ತಿದ್ದುಪಡಿಗಳ ಪ್ರಸ್ತಾಪಗಳೊಂದಿಗೆ ಅಸ್ತಿತ್ವದಲ್ಲಿರುವ ಕಾನೂನುಗಳ ವಿಮರ್ಶಾತ್ಮಕ ವಿಶ್ಲೇಷಣೆಗೆ ಆದ್ಯತೆ ನೀಡಲಾಗುವುದು. ಅನ್ಯಾಯವನ್ನು ಎದುರಿಸುವುದು, ಶಾಂತಿಯನ್ನು ಉತ್ತೇಜಿಸುವುದು ಮತ್ತು ನ್ಯಾಯವನ್ನು ಖಾತರಿಪಡಿಸುವುದರ ಮೇಲೆ ಪ್ರಯತ್ನಗಳು ಗಮನಹರಿಸಬೇಕು, ಎಸ್.ಐ.ಓ ವು ರಾಷ್ಟ್ರೀಯ, ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ಈ ಸಮಸ್ಯೆಗಳನ್ನು ಎತ್ತುವ ಮತ್ತು ಪರಿಹರಿಸುವತ್ತ ಒತ್ತು ನೀಡಬೇಕು.

ಕಾರ್ಯಕ್ರಮಗಳು:

- ರಾಜ್ಯವು ಕರ್ನಾಟಕದಲ್ಲಿ, ವಿಶೇಷವಾಗಿ ಮುಸ್ಲಿಮರು ಮತ್ತು ಅಂಚಿನಲ್ಲಿರುವ ಸಮುದಾಯಗಳ ವಿರುದ್ಧದ ದ್ವೇಷ ಭಾಷಣ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಘಟನೆಗಳನ್ನು ದಾಖಲಿಸುತ್ತದೆ.
- ರಾಜ್ಯವು ಸಾಮಾಜಿಕ ನ್ಯಾಯದ ಆಧಾರದ ಮೇಲೆ ಇತರ ಸಂಸ್ಥೆಗಳೊಂದಿಗೆ ಅನ್ವೇಷಿಸಬೇಕು ಮತ್ತು ಸಹಯೋಗದ ಪ್ರಯತ್ನಗಳನ್ನು ತೆಗೆದುಕೊಳ್ಳವುದು.

ಮಾರ್ಗಸೂಚಿಗಳು:

- ನ್ಯಾಯದ ವಿಷಯದ ಕುರಿತು ಕಾಲೇಜುಗಳ ಚರ್ಚೆಯಲ್ಲಿ ತೊಡಗಿಸಿಕೊಳ್ಳಲು ಘಟಕಗಳನ್ನು ಪ್ರೋತ್ಸಾಹಿಸಲಾಗುತ್ತದೆ.
- ರಾಜ್ಯದ ಮಾರ್ಗದರ್ಶನದಲ್ಲಿ ಕಾನೂನು ಜಾಗೃತಿ ಉಪನ್ಯಾಸಗಳನ್ನು ಸಂಘಟಿಸಲು ಘಟಕಗಳು ಮತ್ತು ಜಿಲ್ಲೆಗಳನ್ನು ಪ್ರೋತ್ಸಾಹಿಸಲಾಗುತ್ತದೆ.
- ಶಾಂತಿ ಮತ್ತು ನ್ಯಾಯದ ವಾತಾವರಣವನ್ನು ಉತ್ತೇಜಿಸಲು ಇತರ ಶಾಂತಿಪ್ರಿಯ ಸಂಸ್ಥೆ/ಸಮುದಾಯ ನಾಯಕರೊಂದಿಗೆ ಸಹಕರಿಸಲು ಘಟಕಗಳನ್ನು ಪ್ರೋತ್ಸಾಹಿಸಲಾಗುತ್ತದೆ.

ಇಸ್ಲಾಮಿನ ತಾತ್ವಿಕ ಮೌಲ್ಯಗಳ ಬೆಳಕಿನಲ್ಲಿ ಎಸ್.ಐ.ಓ ವು ವಿದ್ಯಾರ್ಥಿ ಯುವಜನರಲ್ಲಿ ಪರಿಸರ ಸಂರಕ್ಷಣೆಯ ಪರಿಜ್ಞಾನ ಮೂಡಿಸುತ್ತದೆ.

ನೈಸರ್ಗಿಕ ವಾತಾವರಣ ಮತ್ತು ಸಂಪನ್ಮೂಲಗಳಿಗೆ ಮಾಡುವ ಹಾನಿ ಹಾಗೂ ನಾಶದ ಫಲಿತಾಂಶವಾಗಿ ಪರಿಸರ ಬಿಕ್ಕಟ್ಟುಗಳು ಸೃಷ್ಟಿಯಾಗಿವೆ. ಇದು ಜಾಗತಿಕವಾಗಿ ನಿರ್ಣಾಯಕ ಸಮಸ್ಯೆಯಾಗಿ ಕಾಡುತ್ತಿದೆ. ಸ್ವಭಾವತಃ ಇದು ಕೇವಲ ಪರಿಸರ ಬಿಕ್ಕಟ್ಟು ಮಾತ್ರವಲ್ಲ. ಬದಲಾಗಿ, ಇದು ಸೈದ್ಧಾಂತಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಆರೋಗ್ಯದ ಆಯಾಮವನ್ನೂ ಕೂಡ ಒಳಗೊಂಡಿದೆ. ಎಸ್.ಐ.ಓ ವು ಇಸ್ಲಾಮಿನ ಪರಿಕಲ್ಪನೆಯಾಗಿರುವ 'ಭೂಮಿಯು ವಾಸಯೋಗ್ಯ' (ಇಮಾರತುಲ್ ಅರ್ದ್) ಅನ್ನು ಉಪಯೋಗಿಸಿ ವಿದ್ಯಾರ್ಥಿ ಯುವಕರನ್ನು ಇಸ್ಲಾಮಿನ ತತ್ವಗಳ ಆಧಾರದಲ್ಲಿ ಕಥನವನ್ನು ಸೃಷ್ಟಿಸಲು ಹಾಗೂ ಮನುಷ್ಯರು ಮತ್ತು ಪರಿಸರದ ಶಾಂತಿಯುತ ಸಹ ಅಸ್ಥಿತ್ವವನ್ನು ಸಾಧಿಸಲು ಸಂವೇದನಾಶೀಲರನ್ನಾಗಿಸಬೇಕು. ಎಸ್.ಐ.ಓ ವು ತನ್ನ ಕಾರ್ಯಕರ್ತರಲ್ಲೂ ನಾಗರೀಕ ಪ್ರಜ್ಞೆಯನ್ನು ಬೆಳೆಸಬೇಕು. ಸರಕಾರದ ನೀತಿ, ರಾಜ್ಯ, ವಕಾಲತ್ತು, ಸಂಸ್ಥೆಗಳ ನಿಟ್ಟಿನಲ್ಲಿ ಪರಿಸರ ಸಮಸ್ಯೆಯನ್ನು ಅಭಿಸಂಬೋಧಿಸಲು ಸಮಾಜದ ಕರ್ತವ್ಯನಿಷ್ಠ ವಿಭಾಗದ ಜೊತೆ ಮತ್ತು ಪರಿಸರ ಸಂಘಟನೆಗಳ ಜೊತೆ ಅಗತ್ಯಾನುಸಾರ ಮೈತ್ರಿಯನ್ನು ಸಾಧಿಸಬೇಕು.

ಕಾರ್ಯಕ್ರಮಗಳು:

- ರಾಜ್ಯಮಟ್ಟದಲ್ಲಿ ಪರಿಸರ ಸಂರಕ್ಷಣೆಯ ಅಭಿಯಾನವನ್ನು ಹಮ್ಮಿಕೊಳ್ಳಲಾಗುವುದು.
- ರಾಜ್ಯವು ಪರಿಸರಕ್ಕೆ ಸಂಬಂಧಿಸಿದ ವಿಚಾರದಲ್ಲಿ ಇತರ ಪರಿಸರ ಸ್ನೇಹಿ ಗುಂಪುಗಳ ಜೊತೆ ಜಂಟಿಯಾಗಿ ಕಾರ್ಯ ನಿರ್ವಹಿಸುವುದು.
- ಪರಿಸರ ಸಂಬಂಧಿತ ಸಮಸ್ಯೆಗಳಲ್ಲಿ ಸರ್ಕಾರದ ನೀತಿಗಳ ಮೇಲೆ ಪ್ರಭಾವ ಬೀರಲು ಹಾಗೂ ವಕಾಲತ್ತು ನಡೆಸಲು ಶ್ರಮಿಸುವುದು.
- ರಾಜ್ಯವು ಇಸ್ಲಾಮಿನ ದೃಷ್ಟಿಕೋನದಲ್ಲಿ ಪರಿಸರದ ವಿಚಾರವನ್ನು ಅನ್ವೇಷಿಸುವುದು ಮತ್ತು ವಿಷಯ ವಸ್ತುವನ್ನು ಪ್ರಸಾರ ಪಡಿಸುವುದು.

ಮಾರ್ಗಸೂಚಿಗಳು:

- ನಮ್ಮ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು ಪರಿಸರ ಸ್ನೇಹಿಯಾಗಿರಬೇಕು.
- ಸ್ಥಾನೀಯ ಘಟಕವು ಸ್ಥಳೀಯ ಪರಿಸರ ಸಮಸ್ಯೆಗಳನ್ನು ಬಗೆಹರಿಸಲು ಶ್ರಮಿಸುವುದು.
- ಪರಿಸರ ಸ್ನೇಹಿ ವಸ್ತುಗಳ ಬಳಕೆಗೆ ಕಾರ್ಯಕರ್ತರನ್ನು ಪ್ರೇರೇಪಿಸುವುದು.
- ಸ್ಥಾನೀಯ ಘಟಕವು ಸ್ಥಳೀಯ ಪರಿಸರವಾದಿಗಳು ಮತ್ತು ಪರಿಸರ ಗುಂಪುಗಳ ಜೊತೆ ತೊಡಗಿಸಿಕೊಳ್ಳುವುದು.
- ಪರಿಸರ ಸಂವಾದ ತರಹದ ನೋಡ್ಸ್ ಗಳಲ್ಲಿ ಸೇರಲು ಮತ್ತು ಅದರ ಜೊತೆ ತೊಡಗಿಸಿಕೊಳ್ಳಲು ಸದಸ್ಯರನ್ನು ಪ್ರೇರೇಪಿಸಲಾಗುವುದು.
- ರಾಜ್ಯವು ಆಸಕ್ತ ಸದಸ್ಯರಿಗೆ ಪರಿಸರ ಸಮಸ್ಯೆಯನ್ನು ಅಧ್ಯಯನ ನಡೆಸಲು ಮತ್ತು ನೀತಿಗಳಲ್ಲಿ ಪರಿಣಾಮ ಬೀರಲು ಪ್ರೇರೇಪಿಸಲಾಗುವುದು.

ಸಂಘಟನೆಯು ಕಲೆ, ಸಂಸ್ಕೃತಿ ಮತ್ತು ಸಾಹಿತ್ಯವನ್ನು ಅದರ ಸ್ಫೂರ್ತಿಯೊಂದಿಗೆ ವಿದ್ಯಾರ್ಥಿ ಯುವಜನರಲ್ಲಿ ಉತ್ತೇಜಿಸುವುದು. ಆ ಮೂಲಕ ಇಸ್ಲಾಮಿನ ಮೌಲ್ಯಗಳನ್ನು ಜನ ಸಮೂಹದ ಮುಂದಿಡುವುದು. ಈ ನಿಟ್ಟಿನಲ್ಲಿ ವಿದ್ಯಾರ್ಥಿ ಯುವಜನರಲ್ಲಿ ಕ್ರಿಯಾಶೀಲ ಸಾಮರ್ಥ್ಯವನ್ನು ಬೆಳೆಸಲು ಗಮನಹರಿಸಲಾಗುವುದು.

ಸರ್ವಶಕ್ತ ಅಲ್ಲಾಹನು ಅಲ್ ಜಮೀಲ್ ಅಂದರೆ ಸುಂದರನಾಗಿದ್ದಾನೆ ಮತ್ತು ಆತ ಸೌಂದರ್ಯದ ಏಕೈಕ ಮೂಲವಾಗಿದ್ದಾನೆ. ಲೌಕಿಕವಸ್ತುಗಳಲ್ಲಿ ಸೌಂದರ್ಯವನ್ನು ರೂಪಿಸಿದವನು ಮತ್ತು ಆ ಬಗ್ಗೆ ಮನುಷ್ಯರಲ್ಲಿ ಅಭಿರುಚಿಯನ್ನು ಬೆಳೆಸಿದವನು ಆತನಾಗಿದ್ದಾನೆ. ಕಲೆ ಮತ್ತು ಸಾಹಿತ್ಯವು ಸೌಂದರ್ಯವನ್ನು ವ್ಯಕ್ತಪಡಿಸುವ ಅಗತ್ಯ ರೂಪವಾಗಿದೆ. ಅಲ್ಲದೇ ಅದು ತನ್ನಲ್ಲಿ ಸಂಸ್ಕೃತಿಯ ಬೃಹತ್

ಬಂಡವಾಳವನ್ನ ಹೊಂದಿದೆ. ಇಸ್ಲಾಮಿನ ಸಿದ್ಧಾಂತವನ್ನು ಒಳಗೊಂಡಿರುವ ಜನರು ತಮ್ಮ ಕ್ರಿಯಾಶೀಲತೆಯ ಮಿತಿಯನ್ನು ವಿಸ್ತಾರಗೊಳಿಸಬೇಕು ಹಾಗೂ ತತ್ವಬದ್ದ ಕಲೆ ಮತ್ತು ಸಾಹಿತ್ಯವನ್ನ ಪ್ರಕಾಶಿಸಬೇಕು. ಸಂಘಟನೆಯು ತನ್ನ ಸಂದೇಶವನ್ನು ವ್ಯಾಪಕಗೊಳಿಸಲು ಮತ್ತು ಪ್ರಭಾವ ವಲಯವನ್ನು ವಿಸ್ತರಿಸುವ ನಿಟ್ಟಿನಲ್ಲಿ ತನ್ನ ಕಾರ್ಯಕರ್ತರಿಗೆ ಕಲಾ ಸಂಪನ್ಮೂಲಗಳನ್ನು ಸೃಷ್ಟಿಸಲು ಮತ್ತು ಉಪಯೋಗಿಸಲು ಪ್ರೋತ್ಸಾಹಿಸುತ್ತದೆ.

ಕಾರ್ಯಕ್ರಮಗಳು:

- ಕಲೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕಾಗಿ ಸಂವೇದನವನ್ನು ಬಳಸಿಕೊಳ್ಳಲಾಗುವುದು
- ರಾಜ್ಯವು ಚಲನಚಿತ್ರ ನಿರ್ಮಾಣದ ಕಾರ್ಯಾಗಾರವನ್ನು ಆಯೋಜಿಸುವುದು

ಎಸ್.ಐ.ಓ ವು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದಿಂದ ಎದುರಾಗುವ ಸವಾಲುಗಳನ್ನು ವಿಮರ್ಶಾತ್ಮಕವಾಗಿ ಪರಿಹರಿಸುವುದು, ವಿಶೇಷವಾಗಿ ಅತಿಯಾದ ಬಳಕೆಯಾಗುತ್ತಿರುವ ಡಿಜಿಟಲ್ ವಸ್ತುಗಳು ಮತ್ತು ಗ್ಯಾಜೆಟ್ ಗಳ ಬಳಕೆಗೆ ಸಮತೋಲಿತ ವಿಧಾನವನ್ನು ಉತ್ತೇಜಿಸುವತ್ತ ಗಮನ ಹರಿಸುತ್ತದೆ. ಇದರ ಜೊತೆಗೆ ಮಾಹಿತಿಯ ಗೌಪ್ಯತೆ ಮತ್ತು ಕಣ್ಗಾವಲು ಪರಿಣಾಮಗಳೊಂದಿಗೆಯೂ ತೊಡಗಿಸಿಕೊಳ್ಳಲಾಗುವುದು, ಈ ಸಮಸ್ಯೆಗಳ ಬಗ್ಗೆ ಇಸ್ಲಾಮಿನ ದೃಷ್ಟಿಕೋನವನ್ನು ನೀಡಲು ಪ್ರಯತ್ನಿಸುತ್ತದೆ.

ಸಂಘಟನೆಯು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದಿಂದ ಕಲಿಕೆ ಮತ್ತು ನಮ್ಮ ಸಂದೇಶವನ್ನು ಇತರರಿಗೆ ತಲುಪಿಸಲು ಮತ್ತು ಇತರ ರಚನಾತ್ಮಕ ಬಳಕೆಗೆ ಅವಕಾಶಗಳನ್ನು ಒದಗಿಸಲಾಗುವುದು, ಮತ್ತೊಂದೆಡೆ, ಸ್ಮಾರ್ಟ್‌ಫೋನ್‌ಗಳ ವ್ಯಸನ ಮತ್ತು ಅವುಗಳ ಅತಿಯಾದ ಬಳಕೆಯೂ ನೈತಿಕ, ಮಾನಸಿಕ ಮತ್ತು ದೈಹಿಕ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಈ ನಿಟ್ಟಿನಲ್ಲಿ, ಸಂಘಟನೆಯು ನೈತಿಕ ಸೂಕ್ಷ್ಮತೆ ಮತ್ತು ತಂತ್ರಜ್ಞಾನದ ರಚನಾತ್ಮಕ ಮತ್ತು ಸಮತೋಲಿತ ಬಳಕೆಗೆ ಒತ್ತು ನೀಡಲಾಗುವುದು.

ಡಿಜಿಟಲ್ ಚಟ ಮತ್ತು ಅತಿಯಾದ ಸ್ಕ್ರೀನ್ ಸಮಯವು ಗಮನದ ಕೊರತೆ, ನಿದ್ರಾಹೀನತೆ ಮತ್ತು ಅನಾರೋಗ್ಯಕರ ನಡವಳಿಕೆಗಳಿಗೆ ಕಾರಣವಾಗುತ್ತದೆ. ಈ ಸಮಸ್ಯೆಯನ್ನು ಪರಿಹರಿಸಲು, ಸಂಘಟನೆಯು ಡಿಜಿಟಲ್ ವ್ಯಸನದ ತೀವ್ರತೆಯ ಬಗ್ಗೆ ಜಾಗೃತಿ ಮೂಡಿಸಲಾಗುವುದು ಮತ್ತು ಗ್ಯಾಜೆಟ್‌ಗಳ ನೈತಿಕ ಬಳಕೆಯ ಬಗ್ಗೆ ಮಾರ್ಗದರ್ಶನ ನೀಡಲಾಗುವುದು.

ಐಸಿಟಿಗೆ ಸಂಬಂಧಿಸಿದಂತೆ, ಗೌಪ್ಯತೆಯ ಕಳಕಳಿಯು ಅತಿ ಮುಖ್ಯವಾಗಿದೆ. ಸಾಮಾಜಿಕ ಮಾಧ್ಯಮಗಳು, ಡೇಟಾವನ್ನು ಕದಿಯುವ ಮೂಲಕ ಮತ್ತು ಗೌಪ್ಯತೆಯನ್ನು ಬಳಸಿಕೊಳ್ಳುವ ಮೂಲಕ, ತಮ್ಮ ಸ್ವಂತ ಲಾಭಕ್ಕಾಗಿ ವ್ಯಕ್ತಿಗಳನ್ನು ಕೇವಲ ಸರಕುಗಳಾಗಿ ಉಪಯೋಗಿಸುತ್ತಿವೆ. ಎಸ್.ಐ.ಓ ವು ಸರ್ಕಾರದ ಕಣ್ಗಾವಲು ಮತ್ತು ತುಳಿತಕ್ಕೊಳಗಾದ ಗುಂಪುಗಳ ಪ್ರೊಫೈಲ್‌ನ ಸಮಸ್ಯೆಗಳನ್ನು ಸಹ ಪರಿಹರಿಸುವುದು.

ಕಾರ್ಯಕ್ರಮಗಳು:

- ರಾಜ್ಯವು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ವಿಶಾಲ ಪರಿಣಾಮಗಳ ಬಗ್ಗೆ ಜಾಗೃತಿ ಕಾರ್ಯಗಾರವನ್ನು ಆಯೋಜಿಸುವುದು
- ರಾಜ್ಯ / ಜಿಲ್ಲೆ / ಸ್ಥಾನಿಯ ಘಟಕವು ಡಿಜಿಟಲ್ ಚಟ ಮತ್ತು ಡಿಜಿಟಲ್ ಗೌಪ್ಯತೆಯ ಕುರಿತು ಕ್ಯಾಂಪಸ್ ಉಪನ್ಯಾಸ ಸರಣಿಯನ್ನು ಆಯೋಜಿಸುವುದು.

ಮಾರ್ಗಸೂಚಿಗಳು:

- ಸ್ಥಾನಿಯ ಘಟಕವು ಮೊಬೈಲ್ ಮುಕ್ತ ಸೆಶನ್ ಗಳನ್ನು ಹಮ್ಮಿಕೊಳ್ಳುವುದು ಮತ್ತು ಈ ಸಂಸ್ಕೃತಿಯನ್ನು ಕಾರ್ಯಕರ್ತರುಗಳಲ್ಲಿ ಬೆಳೆಸುವುದು.
- ಕಾರ್ಯಕರ್ತರು ಉಚಿತ ಮತ್ತು ಮುಕ್ತ ಮೂಲ ಪರ್ಯಾಯಗಳನ್ನು ಅನ್ವೇಷಿಸಬೇಕು.
- ಈ ಸಮಸ್ಯೆಯನ್ನು ಪರಿಹರಿಸಲು ಘಟಕಗಳು ಮಸೀದಿಯನ್ನು ಕೇಂದ್ರವನ್ನಾಗಿಸಬೇಕು.

ಕಿರಿಯ ಸಹವರ್ತಿಗಳ (ಜೂನಿಯರ್ ಅಸೋಸಿಯೇಟ್ಸ್) ಮನೋಶಾಸ್ತ್ರವನ್ನ ಪರಿಗಣನೆಗೆ ತೆಗೆದು ಅವರನ್ನು ಪೋಷಿಸಲಾಗುವುದು. ಆ ಮೂಲಕ ಅವರಲ್ಲಿ, ಇಸ್ಲಾಮಿಗಾಗಿ ಒಲವು, ನಡೆತೆಯ ಪರಿಷ್ಕರಣೆ, ಪ್ರತಿಭೆಗಳ ಪೋಷಣೆ ಮತ್ತು ಸಂಘಟನೆಯ ಜೊತೆಗಿನ ಸಂಬಂಧದಲ್ಲಿ ಆಸಕ್ತಿಯನ್ನು ಉತ್ತೇಜಿಸಲಾಗುವುದು.

ಮಕ್ಕಳ ಸಾಮರ್ಥ್ಯವನ್ನು ಪೋಷಿಸುವುದು ಮತ್ತು ಉತ್ತೇಜಿಸುವುದು ಅತೀ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ರಾಜ್ಯವು ಮತ್ತು ಸ್ಥಾನೀಯ ಘಟಕವು ಶಾಲೆಯ ಒಳಗೆ ಹಾಗೂ ಹೊರಗೆ ಅವರಿಗಾಗಿ ರಚಿಸುವ ತಮ್ಮ ಕಾರ್ಯಚಟುವಟಿಕೆಯು ಅವರ ಪ್ರಕೃತಿ, ಮನೋಶಾಸ್ತ್ರ ಮತ್ತು ವಯಸ್ಸಿಗೆ ಹೊಂದಾಣಿಕೆಯಾಗುತ್ತಿದೆಯೇ ಎಂಬುವುದನ್ನು ಗಮನಿಸಬೇಕು. ಈ ಕಾರ್ಯಚಟುವಟಿಕೆಗಳ ಮೂಲಕ ಇಸ್ಲಾಮಿನ ಬಗ್ಗೆ ಆಳ ಒಲವು, ನಡತೆಯ ಪರಿಷ್ಕರಣೆ, ಕ್ರಿಯಾಶೀಲತೆಯ ಪೋಷಣೆ, ಸಾಮರ್ಥ್ಯಗಳ ಬೆಳವಣಿಗೆ ಮತ್ತು ಶಿಕ್ಷಣ ಮಟ್ಟದ ಉನ್ನತಿಯನ್ನು

ಪ್ರೋತ್ಸಾಹಿಸಬೇಕು. ಪ್ರಸಕ್ತ ಕಾಲದಲ್ಲಿ ಮಕ್ಕಳ ಮಾನಸಿಕ ಆರೋಗ್ಯವು ಮುಖ್ಯ ಕಳಕಳಿಯಾಗಿದೆ ಮತ್ತು ಅವುಗಳನ್ನು ಅಭಿಸಂಬೋಧಿಸಲು ನಾವು ಶ್ರಮಿಸಬೇಕಾಗಿದೆ. ಅವರನ್ನು ರೂಪಿಸುವಲ್ಲಿ, ಅರ್ಥೈಸುವಲ್ಲಿ ಮತ್ತು ಗ್ರಹಿಕೆಯಲ್ಲಿ ಕಲಾ ಸಲಕರಣೆಗಳು ಪ್ರಮುಖ ಪಾತ್ರವಹಿಸುತ್ತದೆ. ಈ ನಿಟ್ಟಿನಲ್ಲಿ ಜಾಗತಿಕವಾಗಿ ಲಭ್ಯವಿರುವ ವಿಷಯವಸ್ತುಗಳು ಹಾಗೂ ಹೊಸ ವಿಷಯ ವಸ್ತುಗಳ ತಯಾರಿ ಮತ್ತು ಪ್ರಚಾರಕ್ಕೆ ಸಂಘಟನೆಯು ಗಮನ ಹರಿಸಬೇಕು. ಜೂನಿಯರ್ ಅಸೋಸಿಯೇಟ್ಗಳನ್ನು ಎಸ್.ಐ.ಓ ಸದಸ್ಯರಾಗಿ ತರಲು ನಿರಂತರವಾದ ಮತ್ತು ವಿಶೇಷವಾದ ಶ್ರಮವನ್ನು ಹಾಕಬೇಕು.

ಕಾರ್ಯಕ್ರಮಗಳು:

- ರಾಜ್ಯವು JAC ಆಯೋಜಕರ ಕಾರ್ಯಗಾರವನ್ನು ಹಮ್ಮಿಕೊಳ್ಳುವುದು.
- ರಾಜ್ಯವು JAC ಸಮಿತಿಯ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಖಚಿತಪಡಿಸುವುದು.
- ಪ್ರತಿಯೊಂದು ಸ್ಥಾನೀಯ ಘಟಕವು ಕನಿಷ್ಠ ಒಂದು JAC ಯನ್ನು ನಡೆಸುವುದು.
- ಜಿಲ್ಲಾ ಮಟ್ಟದ JAC ಸಾಂಸ್ಕೃತಿಕ ಹಬ್ಬವನ್ನು ಹಮ್ಮಿಕೊಳ್ಳುವುದು.

ಮಾರ್ಗಸೂಚಿಗಳು:

- ಸ್ಥಾನೀಯ ಘಟಕವು ಕ್ರಿಯಾಶೀಲ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಮಕ್ಕಳಿಗೆ ಒಲಿಂಪಿಯಾಡ್ (Olympiad) ಕ್ವಿಝ್ ಇತ್ಯಾದಿ ಪರೀಕ್ಷೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದು.
- ಸ್ಥಾನೀಯ ಘಟಕವು JAC ಗೈಡ್ ನ ಅನುಗುಣವಾಗಿ ವಾರದ ಚಟುವಟಿಕೆಯನ್ನು ರೂಪಿಸುವುದು.
- ಸ್ಥಾನೀಯ ಘಟಕ/ಜಿಲ್ಲೆ ಬೇಸಿಗೆ ಶಿಬಿರ, ಮಕ್ಕಳ ಹಬ್ಬ, ಪ್ರವಾಸ, ಕ್ರೀಡೆ, ಶೈಕ್ಷಣಿಕ ಪ್ರವಾಸ ಇತ್ಯಾದಿಗಳನ್ನು ಹಮ್ಮಿಕೊಳ್ಳುವುದು.
- ಸ್ಥಾನೀಯ ಘಟಕವು ಲಭ್ಯವಿರುವ ಸಂಪನ್ಮೂಲ ಬಳಸಿ JAC ಮ್ಯಾಗಝೀನ್ ಬಿಡುಗಡೆ ಮಾಡುವುದು.
- ಪ್ರತಿಯೊಂದು ಸ್ಥಾನೀಯ ಘಟಕವು ಕನಿಷ್ಠ ಒಂದು ಶಾಲೆಯಲ್ಲಿ JAC ಕಾರ್ಯಕ್ರಮವನ್ನು ನಡೆಸುವುದು.
- ಪ್ರಮುಖ ಸ್ಥಾನಿಯ ಘಟಕಗಳು ಸ್ಲಂ ಪ್ರದೇಶಗಳಲ್ಲಿಯೂ JAC ಅನ್ನು ನಡೆಸಲು ಪ್ರಯತ್ನಿಸಬೇಕು.
- ಸ್ಥಾನೀಯ ಮಟ್ಟದಲ್ಲಿ ಮಕ್ಕಳ ಗ್ರಂಥಾಲಯವನ್ನು ಸ್ಥಾಪಿಸುವುದು.

- ಸ್ಥಾನೀಯ ಘಟಕವು JAC ಮಕ್ಕಳನ್ನು ಸ್ಥಳೀಯ ಗ್ರಂಥಾಲಯ, ವಸ್ತು ಸಂಗ್ರಹಾಲಯ, ಪ್ರತಿಷ್ಠಿತ ಸಂಸ್ಥೆಗಳು, ಕೇಂದ್ರೀಯ ವಿಶ್ವವಿದ್ಯಾಲಯ, ಕಲಾ ಪ್ರದರ್ಶನ, ಐತಿಹಾಸಿಕ ಸ್ಥಳ ಇತ್ಯಾದಿಗಳಿಗೆ ಕರೆದುಕೊಂಡು ಹೋಗುವುದು.
- ಸಂಘಟನಾ ನಾಯಕರೊಂದಿಗೆ JAC ಮಕ್ಕಳ ಭೇಟಿ ಹಮ್ಮಿಕೊಳ್ಳುವುದು.
- ಆಂದೋಲನದ ನಾಯಕರು ನಡೆಸುವ ಶಾಲೆಗಳಲ್ಲಿ JAC ಘಟಕವನ್ನು ಸ್ಥಾಪಿಸುವುದು.

ಎಸ್.ಐ.ಓ ವು ತನ್ನ ಚಟುವಟಿಕೆಗಳಲ್ಲಿ ವಿಸ್ತರಣೆ ಮತ್ತು ಬಲವರ್ಧನೆಗೆ ಸಮಾನ ಪ್ರಾಮುಖ್ಯತೆಯನ್ನ ನೀಡಬೇಕು. ಆ ಮೂಲಕ ಸಂಘಟನೆಯ ಸಂದೇಶವು ವಿದ್ಯಾರ್ಥಿಯವಕರ ಸಮುದಾಯದಲ್ಲಿ ಪಸರಿಸುತ್ತದೆ, ಪ್ರಭಾವ ವಿಸ್ತರಿಸುತ್ತದೆ ಹಾಗೂ ಕಾರ್ಯಕರ್ತರಲ್ಲಿ ಸಂಘಟನಾ ಪ್ರಜ್ಞೆ, ಸೈದ್ಧಾಂತಿಕ ಏಕರೂಪತೆ ಮತ್ತು ಸಮರ್ಪಣಾ ಭಾವ ಬೆಳೆಯುತ್ತದೆ. ಈ ನಿಟ್ಟಿನಲ್ಲಿ ಆಯ್ದ ಪ್ರದೇಶಗಳಿಗೆ ವಿಶೇಷ ಗಮನ ನೀಡಲಾಗುವುದು.

ವಿದ್ಯಾರ್ಥಿಗಳು ಮತ್ತು ಯುವಜನರಲ್ಲಿ ಸಂಘಟನೆಯ ಸಂದೇಶವನ್ನು ಹರಡಲು, ಅದರ ಪ್ರಭಾವದ ವಲಯವನ್ನು ವಿಸ್ತರಿಸಲು ಮತ್ತು ಅವರೊಂದಿಗೆ ಹೆಚ್ಚಿನ ಸಂಖ್ಯೆಯನ್ನು ಸಂಪರ್ಕಿಸಲು, ಸೃಜನಶೀಲತೆ, ನವೀನತೆ ಮತ್ತು ಶ್ರೇಷ್ಠತೆಯನ್ನು ಪ್ರಮುಖ ಚಟುವಟಿಕೆಗಳಲ್ಲಿ ತುಂಬಿಸಲಾಗುವುದು ಮತ್ತು ಭಾಗವಹಿಸುವಿಕೆಯನ್ನು ಉತ್ತೇಜಿಸಲು ಹೊಸ ಮಾರ್ಗಗಳು ಮತ್ತು ಉಪಕ್ರಮಗಳನ್ನು ಅನ್ವೇಷಿಸಲಾಗುವುದು. ಸಂಘಟನೆಯು ತುಲನಾತ್ಮಕವಾಗಿ ದುರ್ಬಲವಾಗಿರುವ ಪ್ರದೇಶಗಳಿಗೆ (ರಾಜ್ಯ, ಜಿಲ್ಲೆ, ನಗರ ಅಥವಾ ಸ್ಥಳೀಯ ಮಟ್ಟ) ನಿರ್ದಿಷ್ಟ ಗಮನವನ್ನು ನೀಡಲಾಗುವುದು.

ಸದಸ್ಯರಲ್ಲಿ ಸಂಘಟನಾ ಪ್ರಜ್ಞೆ, ಶಿಸ್ತು ಬದ್ಧತೆ, ವೈಚಾರಿಕ ಸೌಹಾರ್ದತೆ ಮೂಡುವುದು ಕೂಡ ಅತ್ಯಗತ್ಯ. ಇದಲ್ಲದೆ, ಸಂಘಟನೆಯ ಗುರಿ ಮತ್ತು ಉದ್ದೇಶಗಳನ್ನು ಅನುಸರಿಸುವಲ್ಲಿ ನಿರಂತರವಾಗಿ ಸಕ್ರಿಯವಾಗಿರಲು ಮತ್ತು ಧ್ಯೇಯ, ಪರಸ್ಪರ ಪ್ರೀತಿ, ಸಹಾನುಭೂತಿ, ಪ್ರಾಮಾಣಿಕತೆ, ತ್ಯಾಗ ಮತ್ತು ನಿರ್ಣಯಕ್ಕಾಗಿ ಅಚಲವಾದ ಪ್ರೀತಿಯನ್ನು ಪ್ರದರ್ಶಿಸಲು ಸದಸ್ಯರನ್ನು ಪ್ರೋತ್ಸಾಹಿಸಲಾಗುವುದು. ನಾಯಕತ್ವಕ್ಕೆ ವಿಧೇಯತೆ, ನಿರ್ಧಾರಗಳಿಗೆ ಗೌರವ, ಶಿಸ್ತಿನ ಅನುಸರಣೆ, ಸಹಕಾರ, ತಂಡದ ಮನೋಭಾವ ಮತ್ತು ಉದಾರತೆ ಇತ್ಯಾದಿಗಳಿಂದ ನಿರೂಪಿಸಲ್ಪಟ್ಟ ಆರೋಗ್ಯಕರ ಸಂಘಟನಾ ಸಂಸ್ಕೃತಿಯನ್ನು ಉತ್ತೇಜಿಸಲು ಪ್ರಯತ್ನಗಳನ್ನು

ಮಾಡಲಾಗುವುದು, ಸ್ಥಳೀಯ ಪ್ರದೇಶಗಳಲ್ಲಿ ಕೆಲಸ ಮಾಡುವಲ್ಲಿ ವಿಶೇಷ ಗಮನಹರಿಸಲಾಗುವುದು.

ಕಾರ್ಯಕ್ರಮಗಳು:

- ರಾಜ್ಯವು ಹೊಣೆಗಾರರ ಸಭೆಯನ್ನು ಹಮ್ಮಿಕೊಳ್ಳುವುದು.
- ವಿಸ್ತರಣೆ ಮತ್ತು ಬಲವರ್ಧನೆಯ ಉದ್ದೇಶಕ್ಕಾಗಿ ರಾಜ್ಯವು ಆಯ್ದ ಜಿಲ್ಲೆಗಳಲ್ಲಿ ಜಿಲ್ಲಾ ಸಂಘಟಕರು (District Organisers)ನ್ನು ನೇಮಿಸುವುದು.
- ರಾಜ್ಯವು ಉಮೇದುವಾರು ಸದಸ್ಯರ (Applicant Members) ಸಭೆಯನ್ನು ನಡೆಸುವುದು.
- ರಾಜ್ಯವು ಪ್ರತಿ ಆರು ತಿಂಗಳಿಗೊಮ್ಮೆ ಸ್ಥಾನೀಯ ಘಟಕಗಳ ಅವಲೋಕನ ಸಭೆಯನ್ನು ನಡೆಸುವುದು.
- ರಾಜ್ಯವು ಮುಲಾಕತ್ ಸಿರೀಸ್ ಅನ್ನು ಆಯೋಜಿಸುವುದು.
- ರಾಜ್ಯವು ಆಯ್ದ ಸದಸ್ಯರ ಸಭೆಯನ್ನು ಹಮ್ಮಿಕೊಳ್ಳುವುದು.
- ರಾಜ್ಯವು UP ಮತ್ತು DP ಗಳ ಸಭೆಯನ್ನು ನಡೆಸುವುದು.
- ರಾಜ್ಯವು ರಾಜ್ಯ ಮಟ್ಟದ ಕಾರ್ಯಕರ್ತರ ಸಮಾವೇಶವನ್ನು ಆಯೋಜಿಸುವುದು.
- ರಾಜ್ಯವು ಕಾರ್ಯಕರ್ತರಲ್ಲಿ ನಾಯಕತ್ವ ಗುಣ ಬೆಳೆಸಲು ಗಮನ ನೀಡುವುದು.
- ಜಿಲ್ಲಾ ಮಟ್ಟದ ವಸತಿ ಬೇಸಿಗೆ ಶಿಬಿರ/ಟೀನ್ ಕ್ಯಾಂಪ್ ಶಿಬಿರವನ್ನು ಅರ್ಜಿದಾರರ ಸದಸ್ಯರ ಶಿಬಿರಕ್ಕೆ ಮುಂಚಿತವಾಗಿ ಆಯೋಜಿಸಲಾಗುವುದು.
- ಸ್ಥಾನಿಯ ಮಟ್ಟದಲ್ಲಿ, ಪ್ರತಿ ತಿಂಗಳು ಪರಿಶೀಲನಾ ಸಭೆಯನ್ನು ಆಯೋಜಿಸಬೇಕು.
- ಸ್ಥಾನಿಯ ಘಟಕಗಳು ಕಾರ್ಯಕರ್ತರಿಗೆ "ಮುರ್ಸಲ್ ಆಫ್ ಎಸ್.ಐ.ಓ" (SIO ನ ರಾಯಭಾರಿ) ಆಗಲು ಪ್ರೋತ್ಸಾಹಿಸಬೇಕು.
- ಪ್ರತಿಯೊಬ್ಬ ಸದಸ್ಯನು ಎರಡು ಹೊಸ ಉಮೇದುವಾರು ಸದಸ್ಯರನ್ನು ಸಿದ್ಧ ಮಾಡುವುದು.

ಮಾರ್ಗ ಸೂಚಿಗಳು:

- ರಾಜ್ಯವು ಆಯ್ದ ಕಾರ್ಯಕರ್ತರ ತರಬೇತಿ ಸಭೆಯನ್ನು ನಡೆಸುವುದು

ರಾಜ್ಯ ಮಟ್ಟದ ಸಮಿತಿಗಳು

1) ಅಕಾಡೆಮಿ ಸಪೋರ್ಟ್ ಸೆಲ್
2) ಕರಿಯರ್ ಸಪೋರ್ಟ್ ಸೆಲ್
3) ಜೂನಿಯರ್ ಅಸೋಸಿಯೇಟ್ ಸರ್ಕಲ್ ಕಮಿಟಿ
4) ದಾವಾಹ್ ಕಮಿಟಿ
5) ಪಬ್ಲಿಕ್ ರಿಲೇಶನ್ ಟೀಮ್
6) ಮೀಡಿಯಾ ಟೀಮ್
7) ಆಡಿಟ್ ಟೀಮ್

- حلقہ کیڈرز میں قائدانہ صلاحیتیں پیدا کرنے پر توجہ دے گا۔
- ضلعی سطح پر "ریزیڈینشل سمر کیمپ/ٹینز کیمپ" اپلیکینٹ ممبرز کیمپ سے پہلے منعقد کیا جائے گا۔
- یونٹس کی سطح پر ہر ماہ "ریویو میٹ" کا انعقاد کیا جائے گا۔
- یونٹس کیڈرز کو "مرسَل آف SIO" (SIO کے سفیر) بننے کی ترغیب دیں گی۔
- ہر ممبر کم از کم دو نئے اپلیکینٹ ممبرز بنانے کی کوشش کرے گا۔

ہدایات:

- یونٹس "منتخب ایسو سی ایٹس ٹریننگ پروگرام" منعقد کریں گی۔

حلقہ سطح کمیٹیاں:

1. اکیڈمک سپورٹ سیل
2. کیریئر سپورٹ سیل
3. جے اے سی کمیٹی
4. دعوت کمیٹی
5. پی آر ٹیم
6. میڈیا ٹیم
7. آڈٹ ٹیم

